## BUDGET ESTIMATES FOR 1965-66—DEMANDS FOR GRANTS—DEMAND No. 3—STATE EXCISE—(*Contd.*)

† ಶ್ರೀ ಪಿ. ಎಂ. ದೇವ್ (ಗುಬ್ಬಿ).—ಸ್ವಾಮಿ, ಪಾನನಿರೋಧದ ವಿಷಯದಲ್ಲಿ ನಾನು ಒಂದೆರಡು ವಿಚಾರಗಳನ್ನು ಹೇಳಬಯಸುತ್ತೇನೆ. ಹಿಂದೆ ಸರ್ಕಾರದವರು ಈ ಪಾನನಿರೋಧದ ವಿಷಯದಲ್ಲಿ ಏನೊಂದು ಕಾರ್ಯಕ್ರಮವನ್ನು ತೆಗೆದುಕೊಂಡಿದ್ದರೋ ಅದರಿಂದ ಒಳ್ಳೆಯದಾಗಿತ್ತು. ನಿಜವಾಗಿಯೂ ಸಹ ಸ್ವಲ್ಪ ದಿವಸಗಳವರೆಗೂ ಅದು ಹಾಗೆ ಆಗಿತ್ತು. ಕುಡಿತದಿಂದ ಮನೆ ಮಠಗಳನ್ನು ಕಳೆದುಕೊಂಡಿದ್ದಂಥವರು ಎಷ್ಟೋಜನ ಉತ್ತಮ ಸ್ಥಿತಿಗೆ ಬಂದಿದ್ದರು. ಆದರೆ ಈಗ ಏನಾಗಿದೆ ಎಂದರೆ ಜನತೆಯ ಪ್ರತಿ ನಿತ್ಯದ ಜೀವನದಲ್ಲಿ ಆದರಿಂದ ಅನಾಹುತಗಳು ಜಾಸ್ತಿಯಾಗುತ್ತಿವೆ. ಅಂಥಾ ಒಂದು ಕಾಲ ಈಗ ಬಂದಿದೆ. ಅದರ ಪರಿಣಾಮದಿಂದ ದೇಶಕ್ಕೆ ಮತ್ತು ದೇಶದ ಆಡಳಿತಕ್ಕೆ ಏನಾಗುತ್ತಿದೆ ಎಂಬುದನ್ನು ತಿಳಿದುಕೊಳ್ಳುವುದಕ್ಕೆ ನಿಜವಾದ ವ್ಯವಧಾನ ಬೇಕು. ಅದು ಮುಖ್ಯವಾದ ವಿಚಾರ. ನಾನು ಇದುವರೆಗೂ ನೋಡಿದ್ದರಲ್ಲಿ ಹಳೆಯ ಮೈಸೂರು ಏರಿಯಾದಲ್ಲಿ ಏನಾಗುತ್ತಿದೆ ಎಂದರೆ ಪೋಲೀಸಿನವರು ಮತ್ತು ಜನಗಳು ಎಲ್ಲರೂ ಒಂದಾಗಿ ಅಲ್ಲಲ್ಲೇ ಬೇಕಾದಷ್ಟು ಜನಗಳು ಮತ್ತು ಹುಡಗರೆಲ್ಲರೂ ಕುಡಿಯುವುದಕ್ಕೆ ಶುರು ಮಾಡಿದ್ದಾರೆ.

ಇನ್ನು ಎರಡನೆಯದಾಗಿ ವಿಶಾಲ ಮೈಸೂರಿನಲ್ಲಿ ಏನಾಗಿದೆ ಎಂದರೆ ಜನತೆಗೆ ಪೋಲೀಸಿನವರ ರಕ್ಷಣೆ ಬೇಕಾಗಿದೆ. ಇದೇ ತರಹ ಒಂದು ಪ್ರಯೋಗ ಅಮೇರಿಕಾದಲ್ಲಿ ನಡೆದಿದೆ. ಅದೇನೆಂದರೆ, ಅಮೇರಿಕಾದಲ್ಲಿ ಫೆಡರಲ್ ಆರ್ಮಿಯಲ್ಲಿ ಕುಡಿತವು ಜಾಸ್ತಿಯಾಗಿ ದೇಶವು ಉಳಿಯುವ ಸ್ಥಿತಿಯಲ್ಲಿ ಇರಲಿಲ್ಲ. ಆಗ ಅಲ್ಲಿ ಎರಡನೆಯ ಸ್ಟೇಜು ಬಂತು. ಈ ರೀತಿಯಾಗಿ ಅದರಿಂದ ಬಹಳ ಕೆಟ್ಟದ್ದೂ ಆಗುತ್ತದೆ. ಈಗ ಪೋಲೀಸಿನವರ ವಿಷಯದಲ್ಲಿ ಒಂದು ಮಾತನ್ನು ನಾನು ಹೇಳುತ್ತೇನೆ. ಅದು ಏನೆಂದರೆ ಸಾಮಾನ್ಯವಾಗಿ ಪ್ರತಿಯೊಂದು ತಾಲ್ಲೂಕು ಹೆಡ್‌ಕ್ವಾರ್ಟರಿನಲ್ಲಿಯೂ ವಾರಕ್ಕೆ ಒಂದು ದಿವಸ ವಾರದಲ್ಲಿ ಯಾವುದಾದರೂ ಒಂದು ಸಾರಿ ಸಂತೆ ನಡೆಯತಕ್ಕಂಥ ಪರಿಪಾಠ ನಡೆದುಕೊಂಡು ಬಂದಿದೆ. ಆ ರೀತಿ ಸಂತೆ ನಡೆಯುವ ದಿವಸ ಯಾರಾದರೂ ಪೋಲೀಸಿನವರಿಗೆ ಯಾವುದಾದರೂ ಒಂದು ಕಂಪ್ಲೇಂಟ್ ಕೊಡಬೇಕೆಂದರೆ ಪೋಲೀಸ್ ಸ್ಟೇಷನ್ ಅನ್ನು ಮುಚ್ಚಿರುತ್ತಾರೆ. ನಾನು ಎಷ್ಟೋ ದಿವಸ ಕಂಪ್ಲೇಂಟ್ ಕೊಡುವುದಕ್ಕೆ ಪೋಲೀಸ್ ಸ್ಟೇಷನ್ನಿಗೆ ಹೋಗಿದ್ದೇನೆ, ಅಂಥಾ ಸಂದರ್ಭದಲ್ಲಿ ಪೋಲೀಸ್ ಸ್ಟೇಷನ್‌ನಲ್ಲಿ ಯಾರೂ ಇರುವುದಿಲ್ಲ. ಪೋಲೀಸ್ ಸ್ಟೇಷನ್ ಮುಚ್ಚಿರುತ್ತದೆ. ಸಂತೆ ನಡೆಯುವ ದಿವಸ ಪೋಲೀಸ್ ಸ್ಟೇಷನ್‌ನನ್ನು ಮುಚ್ಚಕೂಡದು ಎಂದು ಹೇಳಿದರೂ ಕೂಡ ಅವರು ಅದನ್ನು ಮನಸ್ಸಿಗೆ ತೆಗೆದುಕೊಳ್ಳುವುದಿಲ್ಲ. ಸಂತೆಯ ದಿವಸ ಅವರು ಪೋಲೀಸ್ ಸ್ಟೇಷನ್‌ನಲ್ಲಿ ಇರುವುದಿಲ್ಲ. ಈ ವಿಚಾರದಲ್ಲಿ ಕೆಲವು ಜನಗಳು ದಿನಬಳಕೆಯ ಮಾತಿನಲ್ಲಿ ಏನು ಹೇಳುತ್ತಾರೆಂದರೆ ಪೋಲೀಸಿನವರು ಎಲ್ಲಿಯೋ ಆಯ್ಕಂಡು ತಿನ್ನುವುದಕ್ಕೆ ಹೋಗಿದ್ದಾರೆ ಎಂದು ಹೇಳುತ್ತಾರೆ. ಎಂದರೆ ಮಾಮೂಲು ತೆಗೆದುಕೊಳ್ಳುವುದಕ್ಕೆ ಹೋಗುತ್ತಾರೆ ಎಂದು ಅದರ ಅರ್ಥ. ಅದರಲ್ಲಿಯೂ ಸಂತೆ ದಿವಸ ದೂರದಿಂದ ಜನ ಬರುತ್ತಾರೆ, ಅವರಲ್ಲಿಗೆ ಹೋಗಿ ವಸೂಲುಮಾಡುವ ಕಷ್ಟವನ್ನು ತಪ್ಪಿಸಿಕೊಳ್ಳಲು, ಇಲ್ಲಿಯೇ ವಸೂಲು ಮಾಡೋಣ ಎನ್ನುವ ದೃಷ್ಟಿಯಿಂದ ಅವರನ್ನು ಹುಡುಕಿಕೊಂಡು ಹೋಗಿರುತ್ತಾರೆ, ಸಿಗುವುದೇ ಇಲ್ಲ. ಪೋಲೀಸು ಖಾತೆಯಲ್ಲಿ ಎಷ್ಟು ಕೆಲಸ ನಡೆಯಬೇಕೋ, ಆದರಲ್ಲಿ 10 ಪರ್ಸೆಂಟಾದರೂ ನಡೆಯುತ್ತಾ ಇದೆಯೊ ಅನ್ನುವುದು ಮುಖ್ಯ ಪ್ರಶ್ನೆ. ಇಷ್ಟೊಂದು ಮಾಮೂಲು ಸುವ್ಯವಸ್ಥಿತವಾಗಿ ಆಗುತ್ತಾ ಇರುವುದನ್ನು ನೋಡಿದರೆ, ಇದರ ಪರಿಣಾಮ ಅಧಿಕಾರಗಳ ಮೇಲೆ, ಇಡೀ ದೇಶದ ಜನತೆಯಮೇಲೆ, ಮಂತ್ರಿಮಂಡಳದ ಮೇಲೆ, ಲೆಜಿಸ್ಲೇಟರುಗಳ ಮೇಲೆ ಆಗಿಯೇ ಆಗುತ್ತದೆ; ಯಾರೂನ್ನೂ ತಪ್ಪಿಸಿಕೊಳ್ಳುವಂಥ ರೀತಿಯಲ್ಲಿಲ್ಲ. ಈ ಹಾದಿಯಲ್ಲಿ ಖಂಡಿತ ಹೋಗುತ್ತಿದ್ದೇವೆ ಅನ್ನುವ ಮಾತನ್ನು ಇಲ್ಲಿ ಹೇಳುತ್ತಾ ಇದ್ದೇನೆ.

ಅಂದರೆ, ಹೀಗಾಗುತ್ತಾ ಇರುವುದರಿಂದ ಏನು ಮಾಡಬೇಕು ಅನ್ನುವ ಪ್ರಶ್ನೆ ನಮ್ಮ ಮುಂದೆ ಎದ್ದು ಬರುತ್ತದೆ. ಈವಾಗ ಅಷ್ಟು ಇಷ್ಟು, ಸಣ್ಣ ಪುಟ್ಟ ಸುಧಾರಣೆಗಳನ್ನು ಮಾಡಿ ಇದನ್ನು ಸರಿಪಡಿಸುತ್ತೇವೆಂದು ಹೇಳಿದರೆ ಖಂಡಿತ ಹಾಸ್ಯಾಸ್ಪದವಾಗುತ್ತದೆ. ಈ ಒಂದು ಮಟ್ಟವನ್ನು (ಸ್ಟೇಜನ್ನು) ಮುಟ್ಟಿದ್ದೇವೆಂದು ನನಗನಿಸುತ್ತದೆ. ಈ ಪ್ರಪಂಚದಲ್ಲಿ ಎಲ್ಲಾ ದೇಶಗಳಲ್ಲಿಯೂ ಏನೇನು ಮಾಡಿದ್ದಾರೆ, ಅದರ ಪರಿಣಾಮವೇನಾಯಿತು ಎಂದು ತಿಳಿದುಕೊಂಡು, ಅದರ ಆಧಾರದ ಮೇಲೆ ಒಂದು ದಾರಿ ಕಂಡು ಹಿಡಿಯುವುದಕ್ಕೆ ಸಾಧ್ಯವೆ ಎಂದು ನಾವು ಆಳವಾಗಿ ಯೋಚನೆ ಮಾಡಬೇಕು. ಈ ದೃಷ್ಟಿಯಿಂದ ನಾನು ಹೇಳುವುದು ಇಷ್ಟು: ಮನುಷ್ಯ ಏತಕ್ಕೆ ಕುಡಿಯುತ್ತಾನೆ? ಅವನ ಜೀವನದಲ್ಲಿ ಬಹಳ ಬೇಸರವಾಗಿರುತ್ತದೆ, ಅದನ್ನು ಹೋಗಲಾಡಿಸಿಕೊಳ್ಳಲು ಕುಡಿಯುತ್ತಾನೆ.

ಅವನ ಸ್ಥಿತಿಗೆ ಜವಾಬ್ದಾರಿಯಾದ ಕಾರಣಗಳಲ್ಲಿ ಕೆಲವು ಅವನ ಕೈಯಲ್ಲಿ ಇರುವುದಿಲ್ಲ. ಆಡಳಿತ ಕೆಟ್ಟಿರುತ್ತದೆ, ಅದು ಕೆಲವಮಟ್ಟಿಗೆ ಕಾರಣವಿರಬಹುದು. ಹೀಗೆ ಇನ್ನೂ ಅನೇಕ ಕಾರಣಗಳು ಆಗಿಯೇ ಆಗುತ್ತವೆ. ಈ ದೃಷ್ಟಿಯಿಂದ ಪಾನ ಬಹಳ ಜಾಸ್ತಿಯಾಗುವುದಕ್ಕೆ ಅವಕಾಶವಿದೆ.

ಇದರಲ್ಲಿ ಫೈನಲ್ ಆಗಿ ನಾನು ಎರಡು ಅಂಶಗಳನ್ನು ಸಜೆಸ್ಟ್ ಮಾಡುತ್ತೇನೆ. ಭಟ್ಟಿ ಇಳಿಸುವುದನ್ನು ಗವರ್ನಮೆಂಟ್ ಸೆಕ್ಟಾರಿಗೆ, ಪಬ್ಲಿಕ್ ಸೆಕ್ಟಾರಿಗೆ ತೆಗೆದುಕೊಂಡು, ವರ್ಷ ವರ್ಷ ಈ ಸ್ಟ್ರೆಂಗ್ತ್ ಕಡಿಮೆ ಮಾಡುತ್ತಾ ಹೋಗಬೇಕು—ಇದು ಒಂದನೆಯದು. ಎರಡನೆಯದು, ಪ್ರತಿಯೊಂದು ತಾಲ್ಲೂಕು ಪ್ಲೇಸಿನಲ್ಲಿಯೂ ಒಂದು ದೊಡ್ಡ ಬಿಲ್ಡಿಂಗ್ ಕಟ್ಟಿಸಿ, ಕುಡಿಯುವವರಿಗೆ ಫ್ರೀಯಾಗಿ ಒದಗಿಸುವುದಕ್ಕೆ ಪ್ರಯತ್ನಮಾಡಿ. ಕುಡಿಯುವುದು ಬಹಳ ಕೆಟ್ಟದ್ದು (ಎಲ್ಲಿ ಕುಡಿದರೂ) ಅನ್ನುವುದನ್ನು ಪ್ರಪಂಚದಲ್ಲಿ ಎಲ್ಲರೂ ಒಪ್ಪುತ್ತಾರೆ. ಇದು ಖಂಡಿತವಾಗಿ ನಿರ್ವಿವಾದವಾದ ಮಾತು.

ಆದರೆ ಅದು ನಿಜವಾಗಿ ಹೋಗಬೇಕಾಗಿದ್ದರೆ, ನೀವು ಆಡಳಿತದಲ್ಲಿ ಮೂಲಭೂತವಾದ ಬದಲಾವಣೆಯನ್ನು ತರಬೇಕು. ಈ ರೀತಿಯಲ್ಲಿ ಅಷ್ಟು ಇಷ್ಟು ಸರಿಮಾಡೋಣ ಎಂಬ ದೃಷ್ಟಿಯನ್ನು ಇಟ್ಟುಕೊಂಡರೆ, ಇದು ಬಡಪಟ್ಟಿಗೆ ಆಗುವುದಿಲ್ಲ. ಈವಾಗ ತಾತ್ಕಾಲಿಕವಾಗಿ ಏನು ಮಾಡಬೇಕು ಅನ್ನುವುದನ್ನು ಹೇಳಿದ್ದೇನೆ. ಕುಡಿಯುವವನಿಗೆ ಡಾಕ್ಟರು ಏನು ಹೇಳುತ್ತಾರೆಂದರೆ, 'ಒಂದೇ ಸರ್ತಿಗೆ ಬಿಟ್ಟುಬಿಟ್ಟರೆ ಹೋಗಿಯೇ ಬಿಡುತ್ತಿ' ಅಂತ. ಈ ದೃಷ್ಟಿಯಿಂದ ಪಬ್ಲಿಕ್ ಸೆಕ್ಟಾರಿನಲ್ಲಿ ಕುಡಿಯುವುದಕ್ಕೆ ಒಂದು ಅವಕಾಶವನ್ನು ಏರ್ಪಾಡು ಮಾಡಬೇಕು. ಇದನ್ನು ಸರಕಾರ ಮಾಡುವುದು.

ನಮ್ಮ ದೇಶದ ಟ್ರೆಡಿಶನ್ ತೆಗೆದುಕೊಂಡರೂ ಕೂಡ ನನಗೆ ಅನ್ನಿಸುತ್ತದೆ: ನಮ್ಮ ಸಭಾಧ್ಯಕ್ಷರಾಗಲಿ ಅಥವ ನಮ್ಮ ಲಾ ಮಿನಿಸ್ಟರಾಗಲಿ ಎಂದೂ ಕುಡಿದಿಲ್ಲ, ಔಷಧ ರೂಪದಲ್ಲಿಯೂ.

**Mr. SPEAKER.**—Needless remark.

ಶ್ರೀ ವಿ. ಎಂ. ದೇವ್.—ಏತಕ್ಕೆ ಹೇಳುತ್ತಿದ್ದೇನೆಂದರೆ, ಕುಡಿಯುವುದರಿಂದ ಹೆಚ್ಚುಗಾರಿಕೆ ಬರಲಿಲ್ಲ. ಅಸ್ಪೃಶ್ಯರಲ್ಲಿ ಬಂದಹಾಗೆ, ನಿಮ್ಮಲ್ಲಿ ಟ್ರೆಡಿಶನಲ್ ಆಗಿ ಬರಲಿಲ್ಲ. ಅದು ಒಂದು ವಾತಾವರಣವಿತ್ತು, ಆದ್ದರಿಂದ ನೀವು ಕುಡಿದಿಲ್ಲ. ಅವರಿಗೆ ಇವರಿಗೆ ಮೂಲಭೂತವಾಗಿ ವ್ಯತ್ಯಾಸವಿದೆಯೆಂದು ಹೇಳಲಿಲ್ಲ. ಅದಕ್ಕೆ ತಕ್ಕ ವಾತಾವರಣವನ್ನು ನಿರ್ಮಾಣ ಮಾಡಬೇಕಾಗಿದೆ. ಅದನ್ನು ಯಾವ ದೃಷ್ಟಿಯಿಂದ ನಿರ್ಮಾಣ ಮಾಡಬೇಕು. ಒಬ್ಬ ಮನುಷ್ಯ ಪ್ರಾಮಾಣಿಕನಾಗಿ ಏನಾದರೂ ಕೆಲಸ ಮಾಡಿ ಅವನ ಜೀವನ ಸಾರ್ಥಕವಾಗಿ ಎಲ್ಲರಿಗೂ ಅನುಕೂಲವಾಗುವ ಹಾಗೆ ಮಾಡಬೇಕು. ಸಮಾಜವಾದಿ ರಾಷ್ಟ್ರಗಳಲ್ಲಿ ದಾರಿಯಲ್ಲಿ ಹೋಗುತ್ತಾ ಇದ್ದರೆ, ಕುಡಿದು ಅಶ್ಲೀಲವಾಗಿ ಮಾತನಾಡುವವರ ಸಂಖ್ಯೆ ಬಹಳ ಕಡಿಮೆ ಎಂದು ಅಚೆ ಹೋದ ಜನರನ್ನು ವಿಚಾರಿಸಿ ತಿಳಿಮುಕೊಂಡಿದ್ದೇನೆ. ಇದಕ್ಕೆ ಮುಖ್ಯ ಕಾರಣವೇನೆಂದು ಅವರನ್ನು ಕೇಳಿದೆ. ಅಲ್ಲಿ ಕೆಲಸ ಬೇಕು ಅನ್ನುವವರ ಸಂಖ್ಯೆಗಿಂತ ಕೆಲಸಗಳು ಜಾಸ್ತಿ ಇರುತ್ತವೆ. ಆದ್ದರಿಂದ ಸರಕಾರದಲ್ಲಿ ಮೂಲಭೂತವಾದ ಬದಲಾವಣೆಗಳನ್ನು ಮಾಡಬೇಕಾಗುತ್ತದೆ.

**Mr. SPEAKER.**—I trust the member has noted down the points.

ಶ್ರೀ ವಿ. ಎಂ. ದೇವ್.—ಆದ್ದರಿಂದ ಹೇಳುವುದು ಇಷ್ಟು ಸ್ವಾಮಿ. ಆಡಳಿತದಲ್ಲಿ ಮೂಲಭೂತವಾದ ಬದಲಾವಣೆಗಳನ್ನು ಮಾಡಿ ಪ್ರತಿಯೊಬ್ಬರಿಗೂ ಅವರ ಜೀವನ ಚೆನ್ನಾಗಿ ಆಗುವಂತೆ ಮಾಡಿ. ನಮ್ಮ ದೇಶದ ವಾತಾವರಣಕ್ಕೆ ತಕ್ಕಂತೆ ಮೂಲಭೂತವಾದ ಬದಲಾವಣೆಗಳು ಬರಬೇಕು. ಆದು ಬರುವವರೆಗೂ ತಾತ್ಕಾಲಿಕವಾಗಿ, ಟೆಂಡರ್ ಕಾಲ್-ಫಾರ್ ಮಾಡುವುದನ್ನು ಬಿಟ್ಟುಬಿಟ್ಟು, ನೀವೇ—ಗವರ್ನ್‌ಮೆಂಟಿನವರೇ ವಹಿಸಿಕೊಂಡು ಪ್ರತಿಯೊಬ್ಬರಿಗೂ ಕುಡಿಯುವುದಕ್ಕೆ ಕೊಡಿ. ಆವಾಗ ಒಳ್ಳೆಯದಾಗುತ್ತದೆ ಎಂದು ಹೇಳಬಯಸುತ್ತೇನೆ.

ಇನ್ನು ಅಡ್ಮಿನಿಸ್ಟ್ರೇಶನ್ ಆಫ್ ಜಸ್ಟೀಸ್ ವಿಷಯ. ಇದರಲ್ಲಿ ಪ್ರತಿಯೊಂದು ಕಡೆಯೂ ಹೇಳುತ್ತಾರೆ—ಎಲ್ಲೆಲ್ಲಿ ಜಾತೀಯತೆ ಇದೆ ಅದೆಲ್ಲಾ ಈ ಮಿನಿಸ್ಟರೆ ಮಾಡುತ್ತಾರೆ.

**Mr. SPEAKER.**—If the member has no better point I take that he has said all he wanted.

ಶ್ರೀ ವಿ. ಎಂ. ದೇವ್.—ಸ್ವಾಮಿ, ನೀವು ಶಾಂತಿ ಕಳೆದುಕೊಂಡಿರುತ್ತೀರಿ... ನಾನು ಏನು ಹೇಳುತ್ತಿದ್ದೇನೆ ಅನ್ನುವುದೇ ಗೊತ್ತಿಲ್ಲ, ಆವಾಗಲೇ ಜಜ್ಡ್‌ಮೆಂಟ್ ಪಾಸ್ ಮಾಡಿಬಿಟ್ಟಿರಿ.

**Mr. SPEAKER.**—The Member is primarily responsible for that. What has the individuality of a Minister to do with the provision made in the Budget? He is speaking of the Speaker or Minister not tasting a drink and all that. Under which Demand does it come?

ಶ್ರೀ ವಿ. ಎಂ. ದೇವ್.—ಸ್ವಾಮಿ, ಆದೂನೂ ಇಲ್ಲದಿದ್ದರೆ, ಏನೂ ಬಿಸಿನೆಸ್ಸೇ ಇಲ್ಲ.

**Mr. SPEAKER.**—He is only justifying what I have said.

ಶ್ರೀ ವಿ. ಎಂ. ದೇವ್.—ಇನ್ನೊಂದು ಏನೆಂದರೆ, ನಿಮಗೆ ಟ್ರೆಡಿಷನ್ ಇರುವುದಿಲ್ಲ. ಕೆಲವರಿಗೆ ಟ್ರೆಡಿಷನ್ ಇರುತ್ತದೆ, ಕೆಲವರಿಗೆ ಟ್ರೆಡಿಶನ್ನಿನಿಂದ ಬರಲಿಲ್ಲ. ನಿಮ್ಮ ಮೇಲೆ ಆಸ್ಪರ್ಶನ್ ಕ್ಯಾಸ್ಟ್ ಮಾಡಲಿಲ್ಲ, ನಿಮ್ಮ ಮನಸ್ಸಿಗೆ ನೋವುಮಾಡಬೇಕೆಂದು ನನಗಿರಲಿಲ್ಲ. If you have misunderstood me, I am sorry.

Mr. SPEAKER.—I can never misunderstand this Hon'ble Member.

Sri V. M. DEO.—I know, Sir.

ಆಮೇಲೆ ಜಾತೀಯತೆ ಮೇಲೆ ಎಲ್ಲಾ ಅಪಾಯಿಂಟ್‌ಮೆಂಟುಗಳನ್ನೂ ಮಾಡುತ್ತ ಇದ್ದಾರೆ ಅಂತ ಹೇಳುತ್ತಾ ಇದ್ದಾರೆ. ಎಲ್ಲಿಯವರೆಗೆ ಸಮಾಜವಾದ ಜಾರಿ ಮಾಡುತ್ತೇವೆಂದು ಹೇಳಿ ಜಾರಿ ಮಾಡದೇ ಇರುತ್ತೀರೋ, ಎಲ್ಲಿಯವರೆಗೆ ಅನ್‌ಎಂಪ್ಲಾಯ್‌ಮೆಂಟು ಇರುತ್ತದೋ, ಅಲ್ಲಿಯವರೆಗೂ ಪ್ರತಿಯೊಬ್ಬ ಮನುಷ್ಯನಿಗೂ, ಮಿನಿಸ್ಟರೇ ಆಗಿರಲಿ ಅಥವಾ ನಾನೇ ಆಗಿರಲಿ, ಯಾರೇ ಆಗಿರಲಿ, ಅಷ್ಟು ಇಷ್ಟು ಜಾತೀಯತೆ ಅಂಟಿಕೊಳ್ಳುವುದು ಖಂಡಿತ. ಅದರಲ್ಲಿ ರಾಮರಾಯರೇ ಆಗಲಿ ಅಥವಾ ನಾನೇ ಆಗಲಿ, ಮಾನ್ಯ ಮಂತ್ರಿಗಳೇ ಆಗಲಿ......

Mr. SPEAKER.—The Hon'ble Member will conclude within two minutes.

ಶ್ರೀ ವಿ. ಎಂ. ದೇವ್.—ನನಗೆ ಅನ್ನಿಸುವುದು ಇಷ್ಟು: ನೀವು ಎಲ್ಲಿಯವರೆಗೆ ಆಡಳಿತದಲ್ಲಿ ಮೂಲಭೂತವಾದ ಬದಲಾವಣೆಗಳನ್ನು ತಂದು, ಕೆಲಸ ಬೇಕೆಂದು ಕೇಳುವ ಜನಸಂಖ್ಯೆಗಿಂತ, ಕೆಲಸಗಳ ಸಂಖ್ಯೆಯನ್ನು ಜಾಸ್ತಿ ಮಾಡುವುದಿಲ್ಲವೊ, ಅಲ್ಲಿಯವರೆಗೆ ನಾವು ಎಷ್ಟೇ ಪ್ರಾಮಾಣಿಕರಾಗಿದ್ದರೂ ನಮ್ಮವರು ತಮ್ಮವರಿಗೆ ಕೆಲಸ ಕೊಡದಿದ್ದರೆ ನಾವು ಸಾರ್ವಜನಿಕ ಕ್ಷೇತ್ರಗಳಲ್ಲಿ ಯಾವ ಒಂದು ಸ್ಥಾನವನ್ನು ಹೊಂದಿದ್ದೇವೆಯೊ ಅದರಲ್ಲಿ ಏನೂ ಕೆಲಸಮಾಡುವುದಕ್ಕೆ ಆಗುವುದಿಲ್ಲ. ಇದರಲ್ಲಿ ಇನ್ನೊಂದು ಮುಖ್ಯವಾದ ಪಾಯಿಂಟ್ ಏನೆಂದರೆ, ಆಗುವುದು ಆಗಿಯೇ ಆಗುತ್ತದೆ. ಎಷ್ಟೋ ಸಾರಿ ನಮ್ಮವರು ತಮ್ಮವರು ಅಂತ ತೆಗೆದುಕೊಳ್ಳುತ್ತೇವೆ. ತಮ್ಮ ಕೆಲಸ ಆಗಬೇಕು ಅನ್ನುವ ದೃಷ್ಟಿಯಿಂದ ಹತ್ತಿರದವರು ಗಂಟುಬೀಳುತ್ತಾರೆ. ಯಾವ ಮಿನಿಸ್ಟರಿದ್ದರೂ ಎಷ್ಟೋ ಸರ್ತಿ ಕೊಡಬೇಕಾಗುತ್ತದೆ. ಆವಾಗ ಅಯೋಗ್ಯರನ್ನು ಹುಡುಕಿಕೊಂಡು ಹೋಗಿ ಕೊಡಬೇಕಾಗುತ್ತದೆ. ಅಂಥವರಿಗೇ ಒಳ್ಳೆಯ ಚಾನ್ಸು ಇರುತ್ತದೆ ; ಅಂಥವರಿಗೇ ಜಾಸ್ತಿ ಕೊಡುವ ಸಂದರ್ಭ ಖಂಡಿತ ಬರುತ್ತದೆ.

ಶ್ರೀ ಎಚ್. ಡಿ. ದೇವೇಗೌಡ (ಹೊಳೇನರಸೀಪುರ).—ಸ್ವಾಮಿ, ನಮ್ಮ ಮುಂದೆ ಇಟ್ಟಿರತಕ್ಕ ಬೇಡಿಕೆಗಳು ಎಂದರೆ 3, 9 ಹಾಗೂ 11 ಈ ಮೂರು ಬೇಡಿಕೆಗಳ ಮೇಲೆ ಕೆಲವು ವಿಚಾರಗಳನ್ನು ಸರಕಾರದ ಗಮನಕ್ಕೆ ತಂದು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಸರಕಾರದವರು ಈ ಸಭೆಯಲ್ಲಿ ಪಾನ ನಿರೋಧದ ನೀತಿಯ ಬಗ್ಗೆ ಯಾವುದನ್ನೂ ಇನ್ನೂ ತಿಳಿಸಲಿಲ್ಲ. ಏಕೆಂದರೆ ನಮ್ಮ ಮುಖ್ಯ ಮಂತ್ರಿಗಳು ಹಿಂದೆ ಒಂದು ಸಾರಿ ಈ ಸಭೆಯಲ್ಲಿ ಪಾನ ನಿರೋಧವನ್ನು ಜಾರಿಗೆ ತರುವುದರ ಬಗ್ಗೆ re-thinking is necessary ಎಂದು ಹೇಳಿದ್ದರು. ಆದರೆ ಮೊನ್ನೆ ನಮ್ಮ ಮಾನ್ಯ ಗೃಹ ಸಚಿವರು ಒಂದು ಪ್ರಶ್ನೆಗೆ ಉತ್ತರ ಕೊಟ್ಟಾಗ, ಎಲ್ಲ ಕಡೆಗಳಲ್ಲಿಯೂ ಪಾನ ನಿರೋಧವನ್ನು ಯಶಸ್ವಿಯಾಗಿ ಮತ್ತು ಚೆನ್ನಾಗಿ ಜಾರಿಗೆ ತರುತ್ತೇವೆ ಎಂದು ತಿಳಿಸಿದ್ದಾರೆ. ಇದು ನಮಗೆ ಅರ್ಥವಾಗುವುದಿಲ್ಲ. ಏಕೆಂದರೆ ಮುಖ್ಯ ಮಂತ್ರಿಗಳು ಒಂದು ರೀತಿಯಾದ ಹೇಳಿಕೆ ಕೊಡುವುದು, ಗೃಹ ಮಂತ್ರಿಗಳು ಒಂದು ರೀತಿಯಾದ ಹೇಳಿಕೆಯನ್ನು ಕೊಡುವುದು ಸರಿಯಲ್ಲ. ಈ ಬಗ್ಗೆ ಸರಕಾರದ ನೇರವಾದ ಹಾಗೂ ನಿರ್ದಿಷ್ಟವಾದ ನಿಲುವೇನು ಮತ್ತು ಯಾವ ರೀತಿಯಾಗಿ ಪಾನ ನಿರೋಧವನ್ನು ಜಾರಿಗೆ ತರಲು ಪ್ರಯತ್ನ ಮಾಡುತ್ತಿದ್ದೀರಿ ಎನ್ನುವುದರ ಬಗ್ಗೆ ಮಾನ್ಯ ಸಚಿವರಿಂದ ವಿವರಗಳನ್ನು ತಿಳಿಯಲಿಚ್ಛಿಸುತ್ತೇನೆ. ನಿನ್ನೆ ದಿನ ನಮ್ಮ ಆರ್ಥಿಕ ಸಚಿವರು ಆದ ಶ್ರೀಮಾನ್ ಜತ್ತಿಯವರು ಹೇಳಿದರು, ಎಷ್ಟು ಜನ ಸಾರಾಯಿಯನ್ನು ತಯಾರಿಸಿ ಕಳ್ಳತನದಿಂದ ಮಾರುತ್ತಿದ್ದಾರೆ ಅದನ್ನು ತಿಳಿಸಿ ಎಂದು. ನಾನು ಹಿಂದೇ ಇದೇ ಮಾನ್ಯ ಸಭೆಯಲ್ಲಿ ತಿಳಿಸಿದ್ದೇನೆ. ಎಲ್ಲೆಲ್ಲಿ ಡ್ರಿಂಕ್ಸನ್ನು ಕುಡಿಯಬೇಕಂದು ಮಾಡಿಲ್ಲವೋ ಅಲ್ಲಿಯೇ ಬಹಿರಂಗವಾಗಿ ತಂದು ಮಾರಾಟ ಮಾಡುತ್ತಿದ್ದಾರೆ. ಮಾನ್ಯ ಸಚಿವರು ಬೇಕಾದರೆ ನನ್ನ ಜೊತೆಯಲ್ಲಿ ಅವರ ಅಧಿಕಾರಿಗಳನ್ನು ಯಾರಾದರೂ ಸರಿಯೇ ಕಳುಹಿಸಿ ಕೊಡಲಿ, ನಾನು ಅವರನ್ನು ಕರೆದುಕೊಂಡು ಹೋಗಿ ಹಾಸನದ ಟೌನಿನಲ್ಲಿ ಮರದಿಂದ ಹೆಂಡವನ್ನು ಇಳಿಸಿಕೊಂಡು ಪೇಟೆಯಲ್ಲಿ ನಿರ್ಭಯವಾಗಿ ಮಾರುತ್ತಿರುವುದನ್ನು ನಿಮಗೆ ಹಿಡಿದುಕೊಡುತ್ತೇನೆ. ಈ ರೀತಿಯಾಗಿ ಪ್ರತಿ ತಾಲ್ಲೂಕು ಹೆಡ್‌ಕ್ವಾರ್ಟರುಗಳಲ್ಲಿ ಆಗುತ್ತಿರುವುದನ್ನು ತಮಗೆ ಬೇಕಾದರೆ ತೋರಿಸಲು ಸಿದ್ಧನಾಗಿದ್ದೇನೆ. ನಾನು ಇದನ್ನು ಏತಕ್ಕಾಗಿ ಹೇಳುತ್ತಿದ್ದೇನೆಂದರೆ ತಾವು ಇದನ್ನು ಜಾರಿಗೆ ತರತಕ್ಕ ಕಾಲದಲ್ಲಿ ನಿನ್ನೆ ಶ್ರೀಮಾನ್ ಹೆಗ್ಗಡೆಯವರು ಹೇಳಿದಂತೆ the law of the land should be respected by one and all, ಎಂದು. ಯಾವಾಗ ಕಾನೂನನ್ನು ನಾವು ರಚನೆ ಮಾಡುತ್ತೇವೋ ಆ ಕಾನೂನಿನಲ್ಲಿ ಏನಾದರೂ ಲೋಪದೋಷಗಳು ಬಂದರೆ ಅದನ್ನು ಪುನಃ ವಿಚಾರ ಮಾಡ

ಬೇಕಾಗಬಹುದು. ಅಂತಹ ಸಂದರ್ಭ ಈಗ ನಮ್ಮ ಮುಂದೆ ಇದೆ. ಏಕೆಂದರೆ ನಮ್ಮ ಈ ಸಭೆಯಲ್ಲಿ ಒಂದು ಕಾನೂನನ್ನು ಮಾಡಿ ಅದು ಎಷ್ಟುಮಟ್ಟಿಗೆ ಜನತೆಗೆ ಪರಿಣಾಮಕಾರಿಯಾಗಿ ಪ್ರಯೋಜನವಾಗವೆ ಜನತೆಗೆ ಅನ್ಯಾಯ ಮಾಡುತ್ತಿದ್ದಾರೆ ಅದನ್ನು ಮತ್ತೆ ಪರಿಶೀಲನೆ ಮಾಡಬೇಕಾದ ಮೂಲಭೂತವಾದ ಒಂದು ಸನ್ನಿವೇಶ ನಮ್ಮ ಮುಂದೆ ಈಗ ಬಂದಿದೆ. ಕಾನೂನು ಮಾಡತಕ್ಕವರು ನೀತಿಯನ್ನು ಉಲ್ಲಂಘನೆ ಮಾಡುತ್ತಿದ್ದಾರೆ. ನಾನು ಇಲ್ಲಿ ಯಾರ ಮೇಲೂ ಆರೋಪಣೆಗಳನ್ನು ಮಾಡುತ್ತಿಲ್ಲ. ನಾವು ಏನು ಕಾನೂನು ಇಲ್ಲಿ ಮಾಡುತ್ತೇವೋ ಅದನ್ನು ಸರಿಯಾಗಿ ಎಕ್ಸಿಕ್ಯೂಟು ಮಾಡುವಂತಹ ಬಿಗಿಯಾದ ಅಧಿಕಾರಿಗಳು ನಮ್ಮಲ್ಲಿಲ್ಲ. ತಾವು ಇವೊತ್ತು ಅಂಕಿ ಅಂಶಗಳನ್ನು ತರಿಸಿ ನೋಡುವುದಾದರೆ ಎಷ್ಟು ಜನ ಪೋಲೀಸು ಅಧಿಕಾರಿಗಳು ಕುಡಿತದಿಂದ ಹೊರಗೆ ಇದ್ದಾರೆ ಎನ್ನುವುದನ್ನು ನೋಡುವಾಗ ತಮಗೇ ಅರ್ಥವಾಗುತ್ತದೆ. ಇದು ಹ್ಯೂಮನ್ ವೀಕ್‌ನೆಸ್. ತಾವು ಏನು ಕಾನೂನನ್ನು ಮಾಡುತ್ತೀರೋ ಅದನ್ನು ಸರಿಯಾಗಿ ಇಂಪ್ಲಿಮೆಂಟು ಮಾಡುವಂತಹ ಧೈರ್ಯ ನಿಮ್ಮ ಅಧಿಕಾರಿಗಳಲ್ಲಿ ಇಲ್ಲ. ಕುಡಿಯುವಂತಹ ಅಧಿಕಾರಿಗಳನ್ನೇ ಕುಡಿಯುವವರನ್ನು ಹಿಡಿಯಬೇಕೆಂದು ನೇಮಕ ಮಾಡಿದರೆ ಅವರಿಂದ ಕಟ್ಟು ನಿಟ್ಟಾದ ನೀತಿಯನ್ನು ಅನುಸರಿಸುವುದಕ್ಕೆ ಸಾಧ್ಯವಾಗುತ್ತದೆಯೇ ಎನ್ನುವುದನ್ನು ತಾವು ವಿಚಾರ ಮಾಡಬೇಕು. ದೇಶದಲ್ಲಿ ಕಟ್ಟುನಿಟ್ಟಾಗಿ ಕಾನೂನನ್ನು ಜಾರಿಗೆ ತರುವಂತಹ ಒಂದು ಮಾರ್ಗವನ್ನು ತಾವು ಕಂಡುಹಿಡಿಯ ಬೇಕಾಗಿ ಬಂದಿದೆ. ಇದಕ್ಕೆ ಮಾಡತಕ್ಕಂತಹ ಮಾರ್ಗ ಮತ್ತು ಕಟ್ಟುನಿಟ್ಟಾಗಿ ಆಚರಿಸತಕ್ಕಂತಹ ಜನ ಇವರೆಲ್ಲರನ್ನೂ ನಾವು ಈಗ ಹುಡುಕಬೇಕು. ಮಾನ್ಯ ಮುಖ್ಯ ಮಂತ್ರಿಗಳು ಹಿಂದೆ ಒಂದು ಸಾರಿ ಇಲ್ಲಿ ಹೇಳಿದಂತೆ 'ರೀ ಥಿಂಕಿಗ್ ಈಸ್ ನೆಸಸರಿ' ಎನ್ನುವಂತೆ ಇದರ ಬಗ್ಗೆ ಸರಕಾರ ಪುನಃ ಪರಿಶೀಲನೆ ಮಾಡುವುದು ಸೂಕ್ತ. ಈ ದಿವಸ ಕೇವಲ ರಾಜ್ಯದ ಆದಾಯದ ಪ್ರಶ್ನೆಯಲ್ಲ. ಇದರಿಂದ ಜನತೆ ಒಂದು ಒಳ್ಳೆಯ ನೀತಿಯನ್ನು ಅನುಸರಿಸುವಂತೆ ಮಾಡಬೇಕಾಗಿದೆ. ಅವರ ಈಗಿನ ಮನೋಭಾವ ಹೋಗಬೇಕು. ಸರಕಾರದ ಹೊಣೆ ಹೊತ್ತ ನಿಮ್ಮ ಅಧಿಕಾರಿಗಳೇ ಇದನ್ನು ಸರಿಯಾಗಿ ಅನುಸರಿಸುತ್ತಿಲ್ಲ ಎಂದು ವಿಷಾದದಿಂದ ಇಲ್ಲಿ ಹೇಳಬೇಕಾಗಿ ಬಂದಿದೆ. ಸರಕಾರ ಇದನ್ನು ಪುನಃ ಪರಿಶೀಲನೆ ಮಾಡದೇ ಹೋದರೆ ನಿಜವಾಗಿಯೂ ಇದು ಬಹಳ ವ್ಯಸನಕರವಾದ ಸಂಗತಿ. ಪ್ರೊಹಿಬಿಷನನ್ನು ಅವಷ್ಟು ಜಾಗ್ರತೆ ತರಲು ಅದಕ್ಕೆ ತಕ್ಕಂತಹ ವಾತಾವರಣವನ್ನು ತಾವು ನಿರ್ಮಾಣ ಮಾಡಿ ಮತ್ತು ಒಂದು ಕಟ್ಟು ನಿಟ್ಟಾದ ವ್ಯವಸ್ಥೆ ಮಾಡಿ. ಪೋಲೀಸರ ಕೈಗೆ ಕೊಟ್ಟು ಈಗ ಮಾಡುತ್ತಿರುವಂತೆ ಮಾಡಿದರೆ ಅದರಿಂದೇನೂ ಆಗುವುದಿಲ್ಲ. ನಾವು ಇಲ್ಲಿಸಿಟ್ ಡ್ರಿಂಕಿಂಗ್‌ನಿಂದ ಏನೇನು ಆಗುತ್ತಿದೆ ಎನ್ನುವುದನ್ನು ನೋಡಿದ್ದೇವೆ. ನನ್ನ ಜಿಲ್ಲೆಗೆ ಒಬ್ಬರು ಉಪಮಂತ್ರಿಗಳು ಪ್ರವಾಸ ಬಂದಿದ್ದಾಗ ಈ ವಿಷಯವನ್ನೂ ಅವರಲ್ಲಿ ಪ್ರಸ್ತಾಪ ಮಾಡಿ ಅವರಿಗೆ ಹೇಳಿದ್ದೇನೆ. ಅದರ ವಿವರಗಳನ್ನು ಇಲ್ಲಿ ಹೇಳಲು ಇಷ್ಟಪಡುವುದಿಲ್ಲ. ಇದರ ಬಗ್ಗೆ ಸರಕಾರ ಕಟ್ಟುನಿಟ್ಟಾದ ನೀತಿಯನ್ನು ಅನುಸರಿಸಲು ಇದನ್ನು ಪುನಃ ಪರಿಶೀಲನೆ ಮಾಡುವುದಕ್ಕೆ ಯೋಜನೆ ಮಾಡಬೇಕೆಂದು ಇಲ್ಲಿ ಹೇಳುತ್ತೇನೆ.

ಕೊನೆಯದಾಗಿ, ನ್ಯಾಯಾಂಗದ ಬಗ್ಗೆ ಒಂದು ಮಾತನ್ನು ಇಲ್ಲಿ ತಿಳಿಸಬೇಕೆಂದಿದ್ದೇನೆ. ನಮ್ಮ ಚನ್ನರಾಯಪಟ್ಟಣದ ತಾಲ್ಲೂಕಿಗೆ ಒಂದು ಮುನ್‌ಸೀಫ್ ಕೋರ್ಟು ಬೇಕೆಂದು ಪ್ರತಿ ಸಾರಿಯೂ ಇಲ್ಲಿಗೆ ಬಂದಾಗ ಸರಕಾರವನ್ನು ಕೇಳುತ್ತಲೇ ಇದ್ದೇವೆ. ಇಲ್ಲಿನ ಜನಕ್ಕೆ ಇಲ್ಲಿ ಕೋರ್ಟಿಲ್ಲದೆ ಬಹಳ ತೊಂದರೆ ಯಾಗುತ್ತಿದೆ. ಅಲ್ಲಿಯ ಜನರೂ ಕೂಡ ಸರಕಾರಕ್ಕೆ ಬಂದು ಮಂತ್ರಿಗಳನ್ನು ಕಂಡು ಇಲ್ಲಿಗೆ ಕೋರ್ಟು ಅಗತ್ಯವಾಗಿ ಬೇಕೆಂದು ಹೇಳಿ ಹೋಗಿದ್ದರು. ಅದು ಈಗ ಯಾವ ಹಂತದಲ್ಲಿದೆ ಎನ್ನುವುದು ನನಗೆ ಗೊತ್ತಿಲ್ಲ. ತಾವು ಸಾಧ್ಯವಾದಮಟ್ಟಿಗೂ ಇಲ್ಲಿಗೆ ಒಂದು ಕೋರ್ಟನ್ನು ಕೊಡಬೇಕಾದುದು ಅಗತ್ಯವಾಗಿದೆ. ಏಕೆಂದರೆ ತಿಪಟೂರು ಕಡೆಯಿಂದ ವ್ಯವಹಾರಗಳಿಗೆ ಬರಬೇಕಾದರೆ ಹೊಳೆನರಸೀಪುರದ ಕೋರ್ಟಿಗೆ ಬರಬೇಕಾಗುತ್ತದೆ. ಇದರಿಂದ 60-65 ಮೈಲಿದೂರ ಬರಬೇಕಾಗಿ ತೊಂದರೆಯಾಗುತ್ತಿದೆ. ಇದರ ಬಗ್ಗೆ ಎಲ್ಲೆಲ್ಲಿ ಕೋರ್ಟುಗಳಾಗಬೇಕು ಎಂದು ಹಿಂದೆ ಮಲ್ಲಪ್ಪ ಕಮಿಟಿ ಮಾಡಿದ್ದಾಗ ಅವರೂ ಕೂಡ ಚನ್ನರಾಯಪಟ್ಟಣದಲ್ಲಿ ಒಂದು ಮುನ್‌ಸೀಫ್ ಕೋರ್ಟು ಕೊಡಬೇಕೆಂದು ಶಿಫಾರಸನ್ನೂ ಕಳುಹಿಸಿದ್ದರೂ ಎಂದು ಕೇಳುತ್ತೇವೆ. ಆದಷ್ಟು ಜಾಗ್ರತೆಯಾಗಿ ಎರಡು ಲಕ್ಷ ಪ್ರಜಾ ಸಂಖ್ಯೆಯುಳ್ಳ ಚನ್ನರಾಯಪಟ್ಟಣದ ತಾಲ್ಲೂಕಿನಲ್ಲಿ ಒಂದು ಮುನ್‌ಸೀಫ್ ಕೋರ್ಟನ್ನು ಕೊಡದೇ ಇರುವುದು ಬಹು ವಿಷಾದವಾದ ಸಂಗತಿ. ಇದನ್ನು ಮಾಡಲು ಶೀಘ್ರವಾದ ಕಾರ್ಯಕ್ರಮ ತೆಗೆದು ಕೊಳ್ಳಬೇಕೆಂದು ತಿಳಿಸಿ ನಾನು ನಾಲ್ಕು ಮಾತುಗಳನ್ನಾಡಲು ಅಧ್ಯಕ್ಷರು ಅವಕಾಶ ಕೊಟ್ಟಿದಕ್ಕಾಗಿ ಅವರಿಗೆ ನನ್ನ ವಂದನೆಗಳು.

†ಶ್ರೀ ಎ. ಎಸ್. ಪಾಟೀಲ್ (ನರಗುಂದ್).—ಸ್ವಾಮಿ, ಈ ಸಭೆಯಲ್ಲಿ ಇಟ್ಟಿರತಕ್ಕ ಬೇಡಿಕೆಗಳನ್ನು ಅನುಮೋದಿಸುತ್ತಾ ನ್ಯಾಯಾಂಗದ ಬೇಡಿಕೆಗಳ ಬಗ್ಗೆ ಕೆಲವಾರು ಸೂಚನೆಗಳನ್ನು ಸೂಚಿಸ ಬಯಸುತ್ತೇನೆ.

(ಶ್ರೀ ಎ. ಎಸ್. ಪಾಟೀಲ್)

ಮೊದಲನೆಯದಾಗಿ, ನ್ಯಾಯಾಂಗದ ಆಡಳಿತವೇನಿದೆ, ಇದನ್ನು ಮೊದಲು ನಾವು ಪರದೇಶಗಳಿಂದ ಅವರು ನೇಮಿಸಿದ ಅನೇಕ ಕಮಿಷನ್ನುಗಳಲ್ಲಿ ಹೇಳಿರುವ ರಿಪೋರ್ಟುಗಳ ಆಧಾರದ ಮೇಲೆ ಇವೊತ್ತು ನ್ಯಾಯಾಂಗದ ಆಡಳಿತ ರೂಪಿತವಾಗಿರುತ್ತದೆ. ಆ ಕಾಲಕ್ಕೆ ನೇಮಿಸಿದ ಕಮಿಷನ್ನುಗಳು ಒಳ್ಳೆಯ ಪ್ರಾಶಸ್ತ್ಯ ಕೊಟ್ಟು ಯೋಗ್ಯವಾದ ಸುಧಾರಣೆಗಳನ್ನು ಮಾಡಿ ಉತ್ತಮವಾದ ಸಂಪ್ರದಾಯಗಳನ್ನು ಹಾಕುವಂತಹ ಒಂದು ನ್ಯಾಯ ಪದ್ಧತಿಯನ್ನು ಇಲ್ಲಿ ಜಾರಿಗೆ ತಂದಿದ್ದಾರೆ. ಆದರೆ ಇನ್ನೂ ಕೆಲವು ಸುಧಾರಣೆಗಳು ಆಗತಕ್ಕದ್ದು ಅವಶ್ಯವಿದೆ. ನ್ಯಾಯಾಂಗದಲ್ಲಿ ಏನಿದೆ ಎಂದರೆ ಮೊದಲನೆಯದಾಗಿ, ಅಲ್ಲಲ್ಲಿ ಬಹಳ ವಿಳಂಬವಾದ ತೀರ್ಮಾನಗಳು ಬರುತ್ತವೆ ಎಂದು ನಾವು ಅನೇಕ ಕಡೆಗಳಲ್ಲಿ ಕೇಳುತ್ತೇವೆ. ತೀರ್ಮಾನಗಳನ್ನು ಕೊಡುವುದರ ಬಗ್ಗೆ ಎಷ್ಟೋ ಸುಧಾರಣೆಗಳು ಆಗಬೇಕು ಎಂದು ಸೂಚನೆ ಕೊಟ್ಟರೂ ಕೂಡ ಹೈಕೋರ್ಟಿನವರು, ಅವರು ಕೊಡುವ ತೀರ್ಮಾನದ ಬಗ್ಗೆ ಬಹಳ ಮಹತ್ವವಿದೆ ಎಂದು ತಿಳಿದಿದ್ದರೂ ಅಲ್ಲಿ ಆಗುವ ತೀರ್ಮಾನಗಳು ಬಹಳ ವಿಳಂಬವಾಗಿಯೇ ಸಾಗುತ್ತಿವೆ. ಇದನ್ನು ತೀವ್ರಗೊಳಿಸಲು ಯಾವುದೇ ರೀತಿಯಾದ ಸೂಕ್ತ ಕಾರ್ಯಕ್ರಮ ತೆಗೆದುಕೊಂಡಂತೆ ಕಾಣಿಸುವುದಿಲ್ಲ. 1935 ನೇ ಇಸವಿಯಲ್ಲಿ ಒಂದು ಲಾ ಕಮಿಷನ್ ಎಂದು ನೇಮಿತವಾಗಿತ್ತು. ಆದು ಮಾನ್ಯ ಮೋತಿಲಾಲ್‌ರವರ ನೇತೃತ್ವದಲ್ಲಿ ಆಗಿದ್ದ ಲಾ ಕಮಿಷನ್ನು, ಅದು ಕೆಲವು ಒಳ್ಳೆಯ ಸೂಚನೆಗಳನ್ನು ಕೊಟ್ಟಿತ್ತು. ಇಂತಿಂತಹ ಕೋರ್ಟುಗಳಲ್ಲಿ ಇಂತಿಷ್ಟು ಅವಧಿಯೊಳಗೆ ತೀರ್ಮಾನಗಳು ಆಗಲೇ ಬೇಕು ಎಂದು ಇತ್ತು. ಈಗ ಹೈ ಕೋರ್ಟಿನಲ್ಲಿ ನಾವು ನೋಡಿದರೆ ಐದಾರು ತಿಂಗಳಲ್ಲಿ ನಿರ್ಣಯವಾಗಬೇಕಾದಂತಹ ತೀರ್ಮಾನಗಳು ವರ್ಷಗಟ್ಟಲೆಯಾದರೂ ತೀರ್ಮಾನವಾಗದೆ ಸಾವಿರಗಟ್ಟಲೆ ಕೇಸುಗಳು ಪೆಂಡಿಂಗ್ ಆಗಿ ಹಾಗೇ ನಿಂತಿವೆ. ಇವುಗಳೆಲ್ಲಾ ಯಾವ ಕಾಲಕ್ಕೆ ತೀರ್ಮಾನವಾಗುವುದೋ ಹೇಗೋ ಗೊತ್ತಾಗುತ್ತಿಲ್ಲ. ಇವು ಹಾಗೇ ಉಳಿದಿವೆ. ಇದರಂತೆ ಸೆಕೆಂಡ್ ಅಪೀಲುಗಳ ಕೇಸುಗಳು ಕೂಡ 2-3 ವರ್ಷಗಳಿಂದ ಹಾಗೇ ಇವೆ. ಇನ್ನು ಫಸ್ಟು ಅಪೀಲು ನೋಡಿದರೆ ಅದು ಮೂರು ನಾಲ್ಕು ವರ್ಷಗಳಷ್ಟು ಕಾಲ ವಿಳಂಬವಾಗುತ್ತಿದೆ. ಇದರಂತೆಯೇ ರಿವಿಷನ್ನು ಅಪೀಲುಗಳು, ಸಿವಿಲ್ ಕೇಸುಗಳು ತೀರ್ಮಾನವಾಗದೇ ಹಾಗೇ ಇವೆ, ಹೈಕೋರ್ಟಿನಲ್ಲಿ ಈಗ 12 ಮಂದಿ ನ್ಯಾಯಾಧೀಶರುಗಳು, ಇದರಲ್ಲಿ ಒಬ್ಬರು ಮುಖ್ಯ ನ್ಯಾಯಾಧೀಶರು ಎಂದು ಇದ್ದರೂ ಸಹ ಇಲ್ಲಿ ಹೀಗೆ ವಿಳಂಬವಾಗುತ್ತಿವೆ. ಇನ್ನು ರಿಟ್ಟು ಪಿಟಿಷನ್ನುಗಳು ಅನೇಕ ತಕರಾರುಗಳಿಗಾಗಿ ಹಾಕಿರುವುದರ ಬಗ್ಗೆ ವಿಳಂಬವಾಗುತ್ತಿರುವುದನ್ನು ಈ ಸಭೆಯಲ್ಲಿ ನಾವು ಎಷ್ಟೋ ಬಾರಿ ಕೇಳಿದುದೂ ಉಂಟು. ಇವು ಇನ್ನೂ ಹಾಗೇ ಉಳಿದಿವೆ. ಮೂರು ನಾಲ್ಕು ವರ್ಷಗಳಾದರೂ ರಿಟ್ಟು ಪಿಟಿಷನ್ನುಗಳು ತೀರ್ಮಾನವಾಗದೆ ಹಾಗೆ ಉಳಿದಿರುವುದರಿಂದ ಇದನ್ನು ತೀವ್ರವಾಗಿ ಪರಿಶೀಲನೆ ಮಾಡಲು 'ಪ್ಯೂನಿ' ಜಡ್ಜ ಎನ್ನುವ ಒಬ್ಬರೋ ಅಥವಾ ಇಬ್ಬರು ನ್ಯಾಯಾಧೀಶರುಗಳನ್ನು ಇದಕ್ಕಾಗಿಯೇ ನೇಮಿಸಿಕೊಂಡು ಇವನ್ನೆಲ್ಲಾ ಮುಗಿಸುವುದು ಅವಶ್ಯವಾಗಿದೆ ಎಂದು ನಾನು ಇಲ್ಲಿ ಸೂಚನೆ ಮಾಡಬಯಸುತ್ತೇನೆ. ಇದರಿಂದ ಜನಕ್ಕೆ ಒಂದು ರೀತಿಯಾದ ಪರಿಹಾರವೂ ಸಿಕ್ಕಿದಂತಾಗುತ್ತದೆ. ನಮ್ಮ ರಾಜ್ಯದಲ್ಲಿಗುವ ಹೈಕೋರ್ಟು ಸರಿಯಾಗಿ ಕೆಲಸ ಮಾಡಲು ನಮಗೋಸ್ಕರ ಇದೆ ಎಂದು ಎಷ್ಟೋ ಜನರು ರಿಟ್ಟು ಪಿಟಿಷನ್'ಗಳನ್ನು ಹಾಕುತ್ತಾರೆ. ಇದರಲ್ಲಿ ಅನೇಕ ಲೋಪದೋಷಗಳು ಇರುತ್ತವೆ ಎಂದು ಎಷ್ಟೋ ಇಲಾಖೆಯಲ್ಲಿರುವ ಖಾತೆಗಳಲ್ಲಿ ಕಣ್ಣು ಮುಚ್ಚಿ ಕುಳಿತುಕೊಂಡು ಸರಕಾರದ ಪರವಾಗಿ ಆರ್ಡರನ್ನು ಮಾಡಿರುತ್ತಾರೆ. ಇವುಗಳ ಬಗ್ಗೆ ತಮಗೆ ಸರಿಯಾದ ನ್ಯಾಯ ಸಿಗುತ್ತದೆ ಎಂದು ಜನ ಹೈ ಕೋರ್ಟಿಗೆ ಹೋಗಲು ಆಸೆ ಪಡುತ್ತಾರೆ. ಎಷ್ಟೋ ಮಂದಿ ರಿಟ್ಟು ಪಿಟಿಷನ್ನುಗಳನ್ನು ಹಾಕಿ ನಾಲ್ಕು ವರ್ಷಗಳಾದರೂ ಕೂಡ ಇನ್ನೂ ಅವು ತೀರ್ಮಾನವಾಗಿಲ್ಲ. ಮೊನ್ನೆ ತಾನೇ ಅಗ್ರಿಕಲ್‌ಚರು ಡಿಪಾರ್ಟುಮೆಂಟಿನಲ್ಲಿ ಎಷ್ಟೊ ಮಂದಿ ನಾಲ್ಕು ವರ್ಷಗಳ ಕಾಲ ನೌಕರಿ ಮಾಡಿದಂತಹವರು ಹೈ ಕೋರ್ಟಿನಲ್ಲಿ ಬಂದ ರಿಟ್ಟು ಪಿಟಿಷನ್ನುಗಳ ತೀರ್ಮಾನದ ಪ್ರಕಾರ ಮನೆಗೆ ಹೋಗಬೇಕಾಯಿತು. ರಿಟ್ಟು ಪಿಟಿಷನ್ನುಗಳನ್ನು ಹಾಕುವುದರಿಂದ ನ್ಯಾಯಸ್ಥಾನದಲ್ಲೇ ಸರಿಯಾದ ನ್ಯಾಯ ಸಿಗುತ್ತದೆ ಎಂದು ಜನರಿಗೆ ಅದರ ಬಗ್ಗೆ ಒಂದು ರೀತಿಯಾದ ಸ್ಯಾಂಕ್ಟಿಟಿ ಇರುವುದರಿಂದ ಅಲ್ಲಿಗೆ ಹೋಗುತ್ತಾರೆ. ಅಲ್ಲಿ ಹಾಕುವ ಕೇಸುಗಳನ್ನು ಎರಡು ಮೂರು ವರ್ಷಗಳ ಕಾಲದಷ್ಟು ವಿಳಂಬ ಮಾಡಿ ತೀರ್ಮಾನ ಕೊಟ್ಟರೆ ಹೇಗೆ?

**Mr. SPEAKER**—The House will uow adjourn and meet after half-an-hour.

---

*The House adjourned for recess at Ten of the Clock and reassembled at Thirty Minutes past Ten of the Clock.*

---

[MR. SPEAKER in the Chair.]

ಶ್ರೀ ಎ. ಎಸ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ಈ ಮೊದಲು ನಾನು ಮಾತನಾಡುತ್ತಾ ನ್ಯಾಯಾಲಯಗಳಲ್ಲಿ ಆಗತಕ್ಕ ವಿಳಂಬದ ಬಗ್ಗೆ ಹೇಳುತ್ತಿದ್ದೆನು. ಒಂದು ಕೇಸು ತೀರ್ಮಾನವಾಗುವುದಕ್ಕೆ ನಾಲ್ಕೈದು ವರ್ಷವಾಗುತ್ತದೆ. ಈ ವಿಳಂಬ ಕಡಿಮೆಯಾಗಬೇಕು. Justice delayed is justice denied ಎಂದು ಹೇಳುತ್ತಾರೆ. ಆದುದರಿಂದ ವಿಳಂಬವಾಗದ ಹಾಗೆ ಸೂಕ್ತ ಕ್ರಮ ತೆಗೆದುಕೊಳ್ಳುವುದು ಅಗತ್ಯ. ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ ಸಿವಿಲ್ ಜಡ್ಜ್ ಕೋರ್ಟಿನಲ್ಲಿ ಕೂಡ ಒಂದು ವರ್ಷ ಸೂಟ್ಸ್ ನಡೆಯುತ್ತವೆ. ಇದನ್ನು ಕಡಿಮೆ ಮಾಡಲು ಕ್ರಮ ತೆಗೆದುಕೊಳ್ಳಬೇಕಾದುದು ನ್ಯಾಯಾಂಗ ಇಲಾಖೆಯ ಕರ್ತವ್ಯ ಎಂದು ಹೇಳುತ್ತೇನೆ. ಕೋರ್ಟಿಗೆ ಹೋದವರು ಸಾಕಷ್ಟು ಹಣ ವ್ಯಯ ಮಾಡಿ ಹಾಳಾಗಿ ಹೋಗುತ್ತಾರೆ. ಐದಾರು ವರ್ಷ ಅಡ್ಡಾಡಿ ಸಾಕ್ಷಿದಾರರನ್ನು ಅನೇಕ ಸಲ ತಂದು ಹಣ ಖರ್ಚು ಮಾಡಿ ಹಾಳಾಗಿ ಹೋದ ಉದಾಹರಣೆಗಳು ಇವೆ. ಆದುದರಿಂದ ತೀವ್ರ ತೀರ್ಮಾನವಾಗುವಂತೆ ಮಾಡುವುದು ನ್ಯಾಯಾಂಗ ಇಲಾಖೆಯ ಕರ್ತವ್ಯ. ಮುಂಬಯಿ ಕರ್ನಾಟಕ ಪ್ರದೇಶದಲ್ಲಿ ಅಪೀಲ ಜುರಿಸ್‌ಡಿಕ್ಷನ್ ವಿಚಾರದಲ್ಲಿ ಸಿವಿಲ್ ಜ್ಯುರಿಸ್‌ಡಿಕ್ಷನ್ ನಲ್ಲಿ ಇದ್ದ ಸಿವಿಲ್ ಜಡ್ಜರಿಗೆ ಟ್ರಾನ್ಸಫರ್ ಮಾಡಿದ್ದಾರೆ. ಮುಂಬಯಿ ಕರ್ನಾಟಕ ಪ್ರದೇಶ ಮರೆತಂತೆ ಕಾಣುತ್ತದೆ. ಆದುದರಿಂದ ಸೂಕ್ತ ತಿದ್ದುಪಡಿ ಮಾಡುವುದು ಆವಶ್ಯಕ ಎಂದು ಸೂಚಿಸುತ್ತೇನೆ. ಧಾರವಾಡದಲ್ಲಿಯ ಸೆಕೆಂಡ್ ಅಡಿಷನಲ್ ಸೆಶನ್ಸ ಜಜ್ ಬಹಳ ದಿವಸದಿಂದ ತೆಗೆದದ್ದು ಆಯಿತು. ಅದು ಸರಿಯಲ್ಲ. ಯಾಕಂದರೆ ಧಾರವಾಡದಲ್ಲಿ 1,600 ಸಿವಿಲ್ ಅಪೀಲ್ಸ್ ಇವೆ. ನಾಲ್ಕೆಂಟು ವರ್ಷದಿಂದ ಅವು ಹಾಗೇ ಅವೆ. ಅಪೀಲ ನಿಕಾಲೆ ಆಗುವುದು ತಡವಾಗುತ್ತಿದೆ. ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ವಿನಂತಿ ಮಾಡುತ್ತೇನೆ.

ನ್ಯಾಯಾಂಗ ಇಲಾಖೆಯಲ್ಲಿ ಅನೇಕ ಸುಧಾರಣೆಗಳಾಗಬೇಕಾಗಿದೆ. ಎಕ್ಸಿಕ್ಯೂಟಿವ್ ಮತ್ತು ಜ್ಯುಡಿಸಿಯರಿ ಸೆಪರೇಶನ್ ಆದಮೇಲೆ ಎಲ್ಲ ಕಡೆ ಸರಿಯಾಗಿ ಕ್ರಮ ಅನುಸರಿಸಿಲ್ಲ. 107 ನೇ ಸೆಕ್ಷನ್ ಪ್ರಕಾರ ಇದ್ದ ಚಾಪ್ಟರ್ ಕೇಸಸ್ ಮದ್ರಾಸಿನಲ್ಲಿ ಜ್ಯುಡಿಶಿಯಲ್ ಮಾಜಿಸ್ಟ್ರೇಟ್ ನೋಡುತ್ತಾರೆ. ಅದೇ ರೀತಿಯಾಗಿ ಜ್ಯುಡಿಶಿಯಲ್ ಮಾಜಿಸ್ಟ್ರೇಟ್ ಇರುವುದು ಸೂಕ್ತ ಎಂದು ನನಗೆ ಅನಿಸುತ್ತದೆ ರೆವೆನ್ಯೂ ಅಧಿಕಾರಿಗಳಿಂದ ಸರಿಯಾದ ರೀತಿಯಲ್ಲಿ ನ್ಯಾಯಾಂಗ ಕೆಲಸ ನಡೆಯುವುದಿಲ್ಲ. ಅವರಿಗೆ ಕಾಯದೆ ಓದುವ ಅನುಕೂಲತೆ ಇರುವುದಿಲ್ಲ ಹಾಗು ವೇಳೆ ಸಿಕ್ಕುವುದಿಲ್ಲ. ಆದಕಾರಣ ಜಜ್ಜಮೆಂಟ್ ಸರಿಯಾಗಿ ಬರುವುದಿಲ್ಲ. ಜನರಿಗೆ ಯೋಗ್ಯ ನ್ಯಾಯ ಸಿಕ್ಕುವುದಿಲ್ಲ. ಈ ರೀತಿ ಅನೇಕ ತಕರಾರುಗಳು ಇವೆ. ಆದುದರಿಂದ ಯೋಗ್ಯ ಏರ್ಪಾಡು ಮಾಡಬೇಕು. ಇನ್ನು ನ್ಯಾಯ ಖಾತೆಯಲ್ಲಿ ಸರಿಯಾದ ಸಂಬಳದ ವ್ಯವಸ್ಥೆ ಇಲ್ಲ ಎಂದು ನನಗೆ ಅನಿಸುತ್ತದೆ. ಮಹಾರಾಷ್ಟ್ರ ರಾಜ್ಯದಲ್ಲಿ ಸಿವಿಲ್ ಜಜ್ಜರಿಗೆ ಕೊಡತಕ್ಕ ಪೇ ಸ್ಕೇಲ್ಸ್ ಚೆನ್ನಾಗಿವೆ. ಪೇ ಸ್ಕೇಲ್ಸ್ ನಮ್ಮಲ್ಲಿ ಬಹಳ ಕಡಿಮೆ ಇದೆ ನ್ಯಾಯಾಧೀಶರಿಗೆ ಸಾಕಷ್ಟು ಸಂಬಳ ಕೊಡುವ ಏರ್ಪಾಡು ಮಾಡುವುದು ಅತ್ಯಾವಶ್ಯಕ. ಐ.ಎ.ಎಸ್ ಆದವರಿಗೆ ಹೆಚ್ಚು ಸಂಬಳ ಸ್ಕೇಲ್ಸ ಇವೆ. ಕಲೆಕ್ಟರ್, ಡೆಪ್ಯುಟಿ ಕಮಿಷನರ್ ಇವರಿಗೆ ಇರುವಷ್ಟೇ ಕೆಲಸ ಕಾರ್ಯಗಳು ಡಿಸ್ಟ್ರಿಕ್ಟ ಜಜ್ಜಸ್‌ರಿಗೆ ಇವೆ. ಈ ಹುದ್ದೆಗಳು ಸಮಾನವಾಗಿವೆ. ಆದುದರಿಂದ ಪೇ ಸ್ಕೇಲ್ಸ ಸಹ ಅಷ್ಟೇ ಇರಬೇಕು. ಐ.ಎ.ಎಸ್. ಸ್ಕೇಲ 1,800 ರೂಪಾಯಿವರೆಗೆ ಇದೆ. ಅವರು ಹೆಚ್ಚು ಇವರು ಕಡಿಮೆ ಎಂದು ವ್ಯತ್ಯಾಸವಿರುವುದು ಸರಿಯಲ್ಲ. ಆದುದರಿಂದ ಇದರ ಬಗ್ಗೆ ಸೂಕ್ತ ಕ್ರಮ ತೀವ್ರವಾಗಿ ತೆಗೆದುಕೊಳ್ಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಕೆಲವು ಕೋರ್ಟುಗಳಿಗೆ ಬಿಲ್ಡಿಂಗ್ ಇಲ್ಲ. ಟೆಂಪರರಿ ಟೆಂಪರರಿ ಎಂದು ಹತ್ತು ವರ್ಷದಿಂದ ಟೆಂಪರರಿಯಾಗಿಯೇ ಇವೆ. ಟೆಂಪರರಿ ಎಂದು ಹೇಳುವುದು ಎಂದು ಹೋಗುತ್ತದೆ ? ಮೂರು ನಾಲ್ಕು ತಾಲ್ಲೂಕು ಕೂಡಿಸಿ ಒಂದು ಕೋರ್ಟು ಮಾಡಬಹುದು. ಇದು ಆಗುತ್ತದೋ ಇಲ್ಲವೋ ಹೇಳಬೇಕು.

ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಸಿವಿಲ್ ಜಡ್ಜಸ್‌ರಿಗೆ ಡಿಸ್ಟ್ರಿಕ್ಟ ಮಾಜಿಸ್ಟ್ರೇಟ್ ಪವರ್ಸ್ ಕೊಡುತ್ತಾರೆ. ಮುಂಬಯಿ ಕರ್ನಾಟಕ ಪ್ರದೇಶದಲ್ಲಿ ಆ ರೀತಿ ಇಲ್ಲ. ಈ ವಿಚಾರದಲ್ಲಿ ಏಕರೂಪತೆ ಎಕೆ ಸಾಧ್ಯವಾಗಿಲ್ಲ ? ಕೆಲವು ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ ಸಿವಿಲ್ ಅಪೀಲ್ಸ್ ಸಾವಿರಗಟ್ಟಲೆ ಇದ್ದರೂ ಕೂಡ ಒಬ್ಬನೇ ಇದ್ದಾನೆ. ಆದರೆ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಇಬ್ಬರು ಸಿವಿಲ್ ಜಡ್ಜಸ್ ಇದ್ದಾರೆ. ಅಲ್ಲಿ 300 ಅಪೀಲ್ಸ್ ಇದ್ದರೂ ಒಬ್ಬನೇ ಇದ್ದಾನೆ. ಇದರ ಬಗ್ಗೆ ಸೂಕ್ತ ವ್ಯವಸ್ಥೆ ಮಾಡಬೇಕು. ಕೇಸಸ್ ತೀವ್ರ ತೀರ್ಮಾನವಾಗುವಂತೆ ಮಾಡಬೇಕಾದುದು ನ್ಯಾಯಾಂಗ ಇಲಾಖೆಯ ಮುಖ್ಯ ಕರ್ತವ್ಯ. ಇದನ್ನು ಮಾಡುತ್ತಾರೆ ಎಂದು ಆಶಿಸುತ್ತೇನೆ. ಎಲ್ಲ ಕಾನೂನುಗಳ ವಿಚಾರದಲ್ಲಿ ಸಮೀಕರಣ ಮಾಡಿ ಏಕರೂಪತೆಯ ಕಾಯದೆ ಅಮಲಿನಲ್ಲಿ ತಂದಿರುತ್ತಾರೆ. ಆದರೆ ಮುಂಬಯಿ ಕರ್ನಾಟಕದಲ್ಲಿ 29 (ಜಿ) ಅದನ್ನು ಮಾಡಬೇಕಾಗಿದೆ. ಈ ಸುಧಾರಣೆ ಮಾಡ

(ಶ್ರೀ ಎ. ಎಸ್. ಪಾಟೀಲ್)

ಬೇಕಾದುದು ಅತ್ಯಗತ್ಯ. ನ್ಯಾಯಾಂಗದಲ್ಲಿ ಏಕರೂಪತೆ ವ್ಯವಸ್ಥೆ ಮಾಡುವುದು ಅತ್ಯಾವಶ್ಯಕ ಎಂದು ಹೇಳಿ ಕೊನೆಯದಾಗಿ ನನಗೆ ಮಾತನಾಡಲು ಅವಕಾಶ ಕೊಟ್ಟಿರತಕ್ಕ ಅಧ್ಯಕ್ಷರನ್ನು ವಂದಿಸಿ ನನ್ನ ಭಾಷಣ ಮುಗಿಸುತ್ತೇನೆ.

†ಶ್ರೀ ಕೆ. ಲಕ್ಕಪ್ಪ (ಹೆಬ್ಬೂರು).—ಅಧ್ಯಕ್ಷರೇ, ನಮ್ಮ ಮೈಸೂರು ರಾಜ್ಯದ ನ್ಯಾಯಾಂಗ ಮಂತ್ರಿಗಳು ಮಂಡಿಸಿರತಕ್ಕ ಬೇಡಿಕೆಗಳ ಬಗ್ಗೆ ಈಗಾಗಲೇ ಅನೇಕ ಮಾನ್ಯ ಸದಸ್ಯರು ಬಹಳವಾಗಿ ತಿಳಿಸಿದ್ದಾರೆ. ನಾನೀಗ ನಮ್ಮ ಸರ್ಕಾರದವರ ಪಾನನಿರೋಧ ನೀತಿಯ ಬಗ್ಗೆ ಅಷ್ಟು ಹೆಚ್ಚಿಗೆ ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಕಾರಣ ಮೈಸೂರು ರಾಜ್ಯದ ಪಾನನಿರೋಧ ನೀತಿಯ ಬಗ್ಗೆ ಒಂದು ಸಾರ್ತಿ ನಮ್ಮ ಆರ್ಥಿಕ ಸಚಿವರಾದ ಶ್ರೀಮಾನ್ ಜತ್ತಿಯವರು ಇದು ಕೇಂದ್ರಕ್ಕೆ ಸಂಬಂಧ ಪಟ್ಟ ವಿಚಾರ ಎಂದು ಹೇಳಿದರು. ಆದರೆ ಇನ್ನೊಂದು ಸಾರ್ತಿ ನಮ್ಮ ನ್ಯಾಯಾಂಗ ಸಚಿವರು ಇದು ನಮ್ಮ ರಾಜ್ಯಕ್ಕೆ ಸಂಬಂಧಪಟ್ಟ ನೀತಿ ಎಂಬುದಾಗಿ ಸ್ಪಷ್ಟವಾಗಿ ಹೇಳಿದ್ದಾರೆ. ಹೀಗಾಗಿ ಈ ದಿವಸ ನಮ್ಮ ಕಾಂಗ್ರೆಸ್ ಸರ್ಕಾರದವರ ನಿರ್ದಿಷ್ಟವಾದ ನೀತಿನಿಯಮಗಳೇನು ಈ ಪಾನನಿರೋಧದ ಬಗ್ಗೆ ಎಂಬುದು ನಮಗೆ ಗೊತ್ತಾಗುತ್ತಿಲ್ಲ. ಅವರಾದರೂ ಮುಂದೆ ತಮ್ಮ ಆತ್ಮ ಶುದ್ಧಿಯಿಂದ ತಮ್ಮ ನಿರ್ದಿಷ್ಟ ನಿಲುವನ್ನು ತಿಳಿಸುತ್ತಿಲ್ಲ.

ಶ್ರೀ ಎಂ. ವಿ. ರಾಮ ರಾವ್ (ನ್ಯಾಯಂಗ ಶಾಖೆಯ ಮಂತ್ರಿಗಳು).—ಇದು ಆಲ್-ಇಂಡಿಯಾ ಪಾಲಸಿ ಎಂತ ಹೇಳಿತ್ತು.........

ಶ್ರೀ ಕೆ. ಲಕ್ಕಪ್ಪ.—ಇದನ್ನು ಅವರು ಆಲ್-ಇಂಡಿಯಾ ಪಾಲಿಸಿ ಎಂತ ಹೇಳಿದರೂ ಕೂಡ ಇದು ಒಂದೊಂದು ರಾಜ್ಯದಲ್ಲಿ ಒಂದೊಂದು ರೀತಿಯಾಗಿದೆ. ಆಂಧ್ರ ಮತ್ತು ಮಹಾರಾಷ್ಟ್ರದವರಲ್ಲಿ ಈ ಬಗ್ಗೆ ಭಿನ್ನಾಭಿಪ್ರಾಯವಿದೆ. ನಮ್ಮ ಸಂಸ್ಥಾನದಲ್ಲಿ ನಡೆಯುತ್ತಿರುವುದನ್ನು ಹೇಳುವುದಾದರೆ-ಬೆಂಗಳೂರು ಜಿಲ್ಲೆಯಲ್ಲಿ ಪಾನನಿರೋಧವನ್ನು ಜಾರಿಗೆ ತಂದಿಲ್ಲ. ಹೀಗೆ ಇದನ್ನು ದೇಶಾದ್ಯಂತವೂ ಜಾರಿಗೆ ತಾರದಿರುವುದರಿಂದ ಇದು ನಮ್ಮಲ್ಲಿ ಯಶಸ್ವಿಯಾಗದಿರಲು ಪ್ರಬಲ ಕಾರಣವಾಗಿದೆ ಎಂತ ಹೇಳುತ್ತೇನೆ. ಆದರಿಂದಲೇ ಈ ನೀತಿ ಇಲ್ಲಿ ವಿಫಲವಾಗಿದೆ. ಇಲ್ಲ ನಮ್ಮ ಸರ್ಕಾರದವರ ನೀತಿ ಈರೀತಿಯಾಗಿರುವುದರಿಂದ ನಮ್ಮ ತುಮಕೂರು ಜಿಲ್ಲೆಯಲ್ಲಿ ಈಗ ಏನಾಗಿದೆ ಎಂಬುದನ್ನು ಹೇಳುತ್ತೇನೆ, ನಮ್ಮ ತುಮಕೂರಿಗೂ ಮತ್ತು ಬೆಂಗಳೂರಿಗೂ ಮಧ್ಯ ಗಡಿ ಸರಹದ್ದಾದ ನಂದೀಹಳ್ಳಿಯ ಹತ್ತಿರ ಒಂದು ಹೆಂಡದಂಗಡಿ ಇದೆ. ಅಲ್ಲಿ ಜನರು ಬೆಂಗಳೂರು ಕಡೆ ಮುಖಮಾಡಿ ಕುಡಿದರೆ ಅದು ತಕ್ಸೀರಾಗುವುದಿಲ್ಲವಂತೆ. ಹಾಗಿಲ್ಲದೆ ಆ ಕುಡಿಯತಕ್ಕ ಮನುಷ್ಯ ಅತ್ತ ತುಮಕೂರು ಕಡೆಗೇನಾದರೂ ಮುಖಮಾಡಿಕೊಂಡು ಕುಡಿದರೆ ಆಗ ಅದು ತಕ್ಸೀರಾಗುತ್ತದೆ ಎಂದು ಹೇಳುತ್ತಾರೆ. ಹೀಗೆ ದಾಬಸಪೇಟೆಯವರೆಗೂ ನಡೆಯುತ್ತಿದೆ. ಅಲ್ಲಿ ಈ ದಿವಸ ಜನರು ಪೋಲೀಸಿನವರ ಎದುರಿನಲ್ಲೇ ಧೈರ್ಯವಾಗಿ ಕುಡಿಯುತ್ತಿದ್ದಾರೆ. ಹೀಗೆ ಪ್ರದರ್ಶನ ಮಾಡಿಕೊಂಡು ಜನರು ಕುಡಿಯುತ್ತಿದ್ದರೆ ಇದು ಇನ್ನೆಷ್ಟರಮಟ್ಟಿಗೆ ಯಶಸ್ವಿಯಾಗಬಹುದು? ನಮ್ಮ ಸರ್ಕಾರ ಇಂಥ ಒಂದು ವಿಚಿತ್ರವಾದ ಪಾನನಿರೋಧ ನೀತಿಯನ್ನು ಜಾರಿಗೆ ತಂದಿರುವುದರಿಂದಲೇ ಇದಿಲ್ಲಿ ಯಶಸ್ವಿಯಾಗಲಿಲ್ಲ ಎಂದು ನಾನು ಮಾನ್ಯ ಮಂತ್ರಿಗಳ ಗಮನಕ್ಕೆ ತರಬಿಚ್ಛಿಸುತ್ತೇನೆ. ನಮ್ಮ ಸರ್ಕಾರದವರು ಈ ನೀತಿಯಲ್ಲಿ ವಿಫಲರಾಗುವುದಕ್ಕೆ ಇದೇ ಕಾರಣ. ಇನ್ನು ಇದರ ಜೊತೆಗೆ ಈ ಪಾನ ನಿರೋಧ ನೀತಿಯನ್ನು ರಾಜ್ಯದಲ್ಲಿ ಜಾರಿಗೆ ತರಲು ಇದನ್ನು ಪೋಲೀಸರ ವಶಕ್ಕೆ ಕೊಡಲಾಗಿದೆ. ಅವರು ಈ ದಿವಸ ಯಾವ ಒಂದು ಕಾನೂನನ್ನು ರಕ್ಷಣೆಮಾಡಬೇಕಾಗಿತ್ತೊ, ಅದನ್ನು ಮಾಡದೆ, ಅದನ್ನು ಉಲ್ಲಂಘನೆ ಮಾಡಿ ಬೇರೊಂದು ಕಾನೂನನ್ನು ರಕ್ಷಣೆಮಾಡುವುದಕ್ಕೆ ಹೊರಟಿದ್ದಾರೆ. ಹೀಗಾಗಿ ಇವರು ಈ ದಿವಸ ಕೋರ್ಟಿನ ಮುಂದೆ ತರತಕ್ಕ ಬಹುಕೇಸುಗಳು ಕೇವಲ ಒಂದು ಟೆಕ್ನಿಕಲ್ ಕಾರಣಕ್ಕಾಗಿ ವಜಾ ಆಗುತ್ತಿವೆ ಎಂಬ ಅಂಶವನ್ನು ನಾನೂ ಕೂಡ ಒಬ್ಬ ವಕೀಲನಾಗಿರುವದರಿಂದ ತಿಳಿಸುತ್ತಿದ್ದೇನೆ. ಹೀಗೆ ನಾನಾ ಕಾರಣಗಳಿಂದ ಪಾನನಿರೋಧ ನೀತಿ ನಮ್ಮ ದೇಶದಲ್ಲಿ ಯಶಸ್ವಿಯಾಗಿಲ್ಲ. ಆದಾಗ್ಯೂ ಇದು ಕಾಂಗ್ರೆಸ್ಸಿನವರ ಒಂದು ಪ್ರತಿಷ್ಠೆಯ ಫಲವಾಗಿ ಉಳಿದುಕೊಂಡು ಬಂದಿದೆ. ಹಿಂದೆ ಮಹಾತ್ಮ ಗಾಂಧಿಯವರು ಆಗಿದ್ದ ಶಿಷ್ಯರಿಗೆ ಇದನ್ನು ದೇಶಾದ್ಯಂತವೂ ಜಾರಿಗೆ ತರಬೇಕೆಂದು ಹೇಳುತ್ತಿದ್ದರು. ಆದರೆ ಈಗಿರತಕ್ಕ ಜನರೇ ಬೇರೆ. ಆದರೂ ಇವರೂ ಸಹಾ ಅವರ ಶಿಷ್ಯರೆಂದು ಹೇಳಿಕೊಂಡು ಇದನ್ನು ಜಾರಿಗೆ ತರದೆ ಇರತಕ್ಕದ್ದು ಅವರ ತತ್ವಕ್ಕೆ ಅವಹೇಳನ ಮಾಡಿದಂತಾಗಿದೆ ಎಂಬುದನ್ನು ನಾನು ಬಹಳ ವ್ಯಸನದಿಂದ ಹೇಳಬೇಕಾಗಿದೆ. ಈ ದಿವಸ ಈ ಕಾಂಗ್ರೆಸ್ ಸಂಸ್ಥೆಯಲ್ಲಿ ಎಲ್ಲಿ ನೋಡಲಿ ಆ ವರ್ಕಿಂಗ್ ಕಮಿಟಿಯಲ್ಲಾಗಲೀ, ಮಂಡಲ ಕಾಂಗ್ರೆಸ್ ಕಮಿಟಿಯಲ್ಲಾಗಲೀ ಅಥವಾ ಆ ಜಿಲ್ಲಾ ಕಾಂಗ್ರೆಸ್ ಕಮಿಟಿಯಲ್ಲಾಗಲೀ ಎಲ್ಲಿ ನೋಡಿದರೂ ಆ ಗಾಂಧಿಯವರ ನೀತಿಯನ್ನು ವಿರೋಧಿಸತಕ್ಕ ಜನರೇ ಜಾಸ್ತಿಯಾಗಿದ್ದಾರೆ. ಆದರೆ ಈ ಕಾಂಗ್ರೆಸ್ ಸಂಸ್ಥೆಯಲ್ಲಿ ಯಾರು ಯಾರು

ಈ ಅಭ್ಯಾಸವನ್ನು ಇಟ್ಟುಕೊಂಡಿದ್ದಾರೆಂಬುದನ್ನು ಕುರಿತು ನಾನು ಅವರ ಹೆಸರುಗಳನ್ನು ಹೇಳುವುದಿಲ್ಲ. ಅವರ ಹೆಸರುಗಳನ್ನು ಬಹಿರಂಗಪಡಿಸುವುದೂ ಸಹಾ ಸರಿಯಾದ್ದಲ್ಲ. ಹೀಗಿದ್ದಾಗ್ಯೂ ಅವರೆಲ್ಲರೂ ಸಹಾ ಈ ದಿವಸ ಅವರು ಗಾಂಧೀ ಅನುಯಾಯಿಗಳೆಂದು ಹೇಳಿಕೊಂಡು ತಿರುಗುತ್ತಿದ್ದಾರೆ. ಇಂಥ ಮುಂದಾಳುಗಳು ಇರತಕ್ಕ ಪಕ್ಷದವರ ಕೈಲಿ ಆಡಳಿತ ಇದ್ದರೆ ಈ ಪಾನ ನಿರೋಧ ದೇಶದಲ್ಲಿ ಇನ್ನೆಷ್ಟರಮಟ್ಟಿಗೆ ಯಶಸ್ವಿಯಾಗಬಲ್ಲದು ? ಇದಕ್ಕಿಂತ ನಾನು ಇದರ ಬಗ್ಗೆ ಹೆಚ್ಚಿಗೆ ಏನೂ ಹೇಳಲಾರೆ.

ಇನ್ನು ನ್ಯಾಯಾಂಗ ವಿಚಾರಕ್ಕೆ ಬಂದರೆ—ಇತ್ತೀಚೆಗೆ ನಮ್ಮ ನ್ಯಾಯಾಂಗ ಮಂತ್ರಿಗಳು ಮೈಸೂರು ರಾಜ್ಯದಲ್ಲಿರತಕ್ಕ ಕೋರ್ಟುಗಳಿಗೆ ಜಡ್ಜಿಗಳನ್ನು ನೇಮಕ ಮಾಡಿಕೊಳ್ಳತಕ್ಕ ವಿಚಾರದಲ್ಲಿ ಅವರು ಹಾಕಿಕೊಂಡಿರತಕ್ಕ ಒಂದು ನೀತಿನೇಮ ಸರಿಯಾದುದೇ ಎಂದು ನಾನು ಅವರನ್ನು ಪ್ರಶ್ನೆ ಮಾಡಬೇಕಾಗಿದೆ. ಸರ್ಕಾರ ಈ ವಿಚಾರದಲ್ಲಿ ಒಂದು ಆಜ್ಞೆಯನ್ನು ಹೊರಡಿಸಿ ಯಾರು 6 ವರ್ಷ ಕೋರ್ಟುಗಳಲ್ಲಿ ವಕೀಲೀ ವೃತ್ತಿಯನ್ನು ನಡೆಸಿರುತ್ತಾರೋ ಅಂಥವರಿಗೆ ಮಾತ್ರ ಕೋರ್ಟುಗಳಲ್ಲಿ ಕೆಲಸಮಾಡಲು ಅರ್ಹತೆಯಿದೆ; ಆದುದರಿಂದ ಆ ಕೆಲಸಗಳಿಗೆ ಅಂಥವರೇ ಅರ್ಜಿಹಾಕಿಕೊಳ್ಳಬೇಕು ಎಂಬುದಾಗಿ ಒಂದು ಸರ್ಕಾರಿ ಆಜ್ಞೆಯನ್ನು ಹೊರಡಿಸಿದ್ದಾರೆ. ಆದರೆ ನನಗೊಂದು ಏನು ಶಂಕೆಯಿದೆ ಎಂದರೆ—ಸರ್ಕಾರದವರು ಬಹುಶಃ ಇಂಥ ಒಂದು ಆಜ್ಞೆಯನ್ನು ಹೊರಡಿಸಿರತಕ್ಕದ್ದರ ಉದ್ದೇಶ ರಾಜ್ಯದಲ್ಲಿರತಕ್ಕ ಹಿಂದುಳಿದ ಜನಾಂಗದವರಿಗೆ ಈ ಕೆಲಸಗಳು ಸಿಕ್ಕಬಾರದು.........

ಶ್ರೀ ಎಂ. ವಿ. ರಾಮ ರಾವ್.—ಮಾನ್ಯ ಸದಸ್ಯರು ಹೇಳತಕ್ಕದ್ದು ಸರಿಯಾಗಿಲ್ಲ. .....

ಶ್ರೀ ಕೆ. ಲಕ್ಕಪ್ಪ.—ಸ್ವಾಮಿ, ನಾನು ಒಂದು ಕ್ರಿಯಾಲೋಪವನ್ನು ಸೂಚಿಸಬೇಕಾಗಿದೆ. ಮಾನ್ಯ ಮಂತ್ರಿಗಳು ನಾನು ಹೇಳತಕ್ಕದ್ದು ಸರಿಯಾಗಿಲ್ಲ ಎಂದು ಹೇಳುತ್ತಿದ್ದಾರೆ. ನಾನು ಹಾಗೆ ಹೇಳುವುದಕ್ಕೆ ನನಗೇನು ತಲೆ ಕೆಟ್ಟಿದೆಯೇ ? ನನಗೇನು ಬುದ್ಧಿಕೆಟ್ಟಿದೆಯೇ ?

ಶ್ರೀ ಎಂ. ವಿ. ರಾಮ ರಾವ್.—ಮಾನ್ಯ ಸದಸ್ಯರು ವಿಚಾರವನ್ನು ಸರಿಯಾಗಿ ತಿಳಿದುಕೊಂಡಿಲ್ಲ ಎಂದು ಹೇಳಿದೆ. ಈಗಿರತಕ್ಕ ಮುನಿಸಿಫ್ಸ್ ರೆಕ್ರೂಟ್‌ಮೆಂಟ್ ರೂಲ್ಸಿನಲ್ಲಿ 4 ವರ್ಷಗಳೆಂತಲೇ ಇದೆ. ಅದರ ಪ್ರಕಾರವೇ ಅರ್ಜಿಗಳನ್ನು ಕರೆಯಲಾಗುತ್ತಿದೆ. ಆದುದರಿಂದ ಅವರು ಹೇಳತಕ್ಕ ರೀತಿಯಾಗಿ 6 ವರ್ಷ ಎಂಬುದು ಸರಿಯಲ್ಲ.

ಶ್ರೀ ಕೆ. ಲಕ್ಕಪ್ಪ.—ನಮ್ಮ ಮಂತ್ರಿಮಂಡಲದ ಸಭೆಯಲ್ಲಿ ಇತ್ತೀಚೆಗೆ ಇದನ್ನು ಬದಲಾವಣೆ ಮಾಡಿ 6 ವರ್ಷಕ್ಕೆ ಹೆಚ್ಚಿಸಿದ್ದಾರೆಂಬ ಪ್ರಬಲವಾದ ಸುದ್ದಿಯನ್ನು ಜವಾಬ್ದಾರಿಯುತರಾದ ಒಬ್ಬರಿಂದ ನಾನು ತಿಳಿದಿದ್ದೇನೆ.

ಶ್ರೀ ಎಂ. ವಿ. ರಾಮ ರಾವ್.—ಅವರು ಆಗಲೇ ಆಜ್ಞೆಯನ್ನು ಹೊರಡಿಸಿದ್ದಾರೆಂದು ಹೇಳಿದರು—ಅದು ಸರಿಯಲ್ಲ.

ಶ್ರೀ ಕೆ. ಲಕ್ಕಪ್ಪ.—ಇದು ನಮ್ಮ ಸರ್ಕಾರದವರ ನಿಲುವು ಎಷ್ಟರಮಟ್ಟಿಗಿದೆ ಎಂಬುದನ್ನು ಸೂಚಿಸುತ್ತದೆ. ಸರ್ಕಾರದವರು ನಮ್ಮ ರಾಷ್ಟ್ರವನ್ನು ಜಾತ್ಯಾತೀತ ರಾಷ್ಟ್ರವನ್ನಾಗಿ ಮಾಡುತ್ತೇವೆ, ಜಾತೀವಾದ ತಲೆಹಾಕುವುದಕ್ಕೆ ಅವಕಾಶವೇ ಇಲ್ಲ, ಇದಕ್ಕೆಲ್ಲಾ ರಾಜ್ಯಾಂಗದಲ್ಲಿ ಸಾಕಷ್ಟು ರಕ್ಷಣೆಯಿದೆ ಎಂದು ಹೇಳತಕ್ಕ ಜನರು, ಹೀಗೆ ನಡೆಯುತ್ತಿರುವುದನ್ನು ನೋಡಿದರೆ ನನಗೆ ತುಂಬಾ ಅನುಮಾನ ಮೂಡಿದೆ. ನಮ್ಮ ಮೈಸೂರಿನ ಚರಿತ್ರೆಯಲ್ಲೇ ಇನ್ನು ಮುಂದಕ್ಕೆ ಈ ನ್ಯಾಯಾಂಗ ಇಲಾಖೆಯಲ್ಲಿ ಕೆಲಸಮಾಡತಕ್ಕ ಅವಕಾಶವಿಲ್ಲ ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಂ. ವಿ. ರಾಮ ರಾವ್.—ಒಂದು ವೇಳೆ 6 ವರ್ಷಗಳೆಂದು ಮಾಡಿದರೂ ಅದು ಎಲ್ಲರಿಗೂ ಒಂದೇ ಸಮನಾಗಿ ಅನ್ವಯಾಗುತ್ತದೆ.

ಶ್ರೀ ಕೆ. ಲಕ್ಕಪ್ಪ.—ಇದನ್ನು ನಮ್ಮ ಮಂತ್ರಿಗಳು ಬಹಳ ಬುದ್ಧಿವಂತಿಕೆಯಿಂದ ತಂದಿದ್ದಾರೆ ಇದರಲ್ಲಿ ಹಿಂದುಳಿದವರಿಗೂ ಮತ್ತು ಮುಂದುಳಿದವರಿಗೂ ಒಂದೇ ಸಮನಾದ ಅವಕಾಶ ಸಿಗುತ್ತದೆ ಎಂದು ಹೇಳುತ್ತಿದ್ದಾರೆ. ಎಲ್ಲೆಲ್ಲಿ ಯಾರು ಯಾರು ಲಾಯರುಗಳಾಗಿ ಕೆಲಸಮಾಡುತ್ತಿದ್ದಾರೆಂಬುದನ್ನು ಪರಿಶೀಲಿಸಿ ಅಂಕೀ ಅಂಶಗಳನ್ನು ನೋಡುವುದಾದರೆ, ಈ ವಕೀಲ ವೃತ್ತಿಯಲ್ಲಿ ಯಾವ ಸಂಪಾದನೆಯೂ ಇಲ್ಲದವರು 4 ವರ್ಷಗಳ ಕಾಲ ಉಳಿಯುವುದಕ್ಕೆ ಸಾಧ್ಯವಿದೆಯೇ ಎಂದು ಕೇಳಬೇಕಾಗಿದೆ.

ಈಗ ಹಿಂದುಳಿದ ಎಲ್ಲಾ ಕೋಮಿನವರಿಗೂ ಕೂಡ ಅವಕಾಶ ಸಿಕ್ಕುವಂತಹ ಪರಿಸ್ಥಿತಿ ಇದೆ. ಆದ್ದರಿಂದ ಇದನ್ನು ಅವರು ತರಬಾರದು ಎಂದು ಮನವಿ ಮಾಡಿಕೊಳ್ಳುತ್ತೇನೆ.

ನೇರವಾಗಿ ಸರ್ಕಾರದ ಪ್ಲೀಡರ್‌ಗಳು ಮತ್ತು ಪಬ್ಲಿಕ್ ಪ್ರಾಸಿಕ್ಯೂಟರ್‌ಗಳನ್ನು ನಮ್ಮ ನ್ಯಾಯ ಮಂತ್ರಿಗಳು, ಸರ್ಕಾರ ನೇಮಕ ಮಾಡತಕ್ಕ ಔಚಿತ್ಯವಾದರೂ ಏನು ಎಂಬುದನ್ನು ಪ್ರಶ್ನೆಗಳ ಮೂಲಕ ಮತ್ತು ಈ ಸಭೆಯಲ್ಲಿ ಕಟ್ ಮೋಷನ್‌ಗಳ ಮೂಲಕ ಕೇಳಬಯಸುತ್ತೇನೆ. ಈ ದಿವಸ ಡೆಪ್ಯೂಟಿ ಕಮಿಷನರು ಅವರ ಹೆಸರುಗಳನ್ನು ತರಿಸಿ ಬಾರ್ ಅಸೋಸಿಯೇಷನ್ ಇಂದ ಅವರ

(ಶ್ರೀ ಕೆ. ಲಕ್ಕಪ್ಪ)

ಅನುಭವವನ್ನು ಅವರ ಎಲ್ಲಾ ವಿಚಾರಗಳನ್ನೂ, ಅವರ ಕ್ಯಾರಕ್ಟರ್ ಅನ್ನು ತರಿಸಿ ಕೂಲಂಕಷವಾಗಿ ಪರಿಶೀಲನೆ ಮಾಡಿ ಅದಕ್ಕೆ ಸರ್ಕಾರದ ಒಪ್ಪಿಗೆಯನ್ನು ಪಡೆಯುವುದು ಎಲ್ಲಾ ಸರ್ಕಾರಗಳೂ ಮಾಡ ತಕ್ಕ ನೀತಿ ಆದರೆ ಈ ನೀತಿಗೆ ವಿರುದ್ಧವಾಗಿ ನ್ಯಾಯಾಂಗ ಮಂತ್ರಿಗಳು ಜಿಲ್ಲಾಧಿಕಾರಿಗಳಿಗೆ ಆಜ್ಞೆ ಯನ್ನು ಕೊಟ್ಟು ಇಂತಹವರ ಹೆಸರನ್ನೇ ಕಳುಹಿಸಬೇಕೆಂದು ಹೇಳಿ ಕೆಲವು ಜಿಲ್ಲೆಗಳಲ್ಲಿ ಒಂದೇ ಕೋಮಿಗೆ ಸೇರಿದ ಪಬ್ಲಿಕ್ ಪ್ರಾಸಿಕ್ಯೂಟರ್ ಮತ್ತು ಗವರ್ನಮೆಂಟ್ ಪ್ಲೀಡರ್‌ಗಳನ್ನು ನೇಮಕ ಮಾಡಿರುವುದನ್ನು ಪ್ರಶ್ನೆ ಮಾಡಬಯಸುತ್ತೇನೆ. ಇದನ್ನು ಮಾನ್ಯ ನ್ಯಾಯಾಂಗ ಮಂತ್ರಿಗಳು ಆತ್ಮ ಪೂರ್ತಿಯಾಗಿ, ಆತ್ಮದ ಮೇಲೆ ಕೈ ಇಟ್ಟುಕೊಂಡು ಈ ನೇಮಕಗಳಲ್ಲಿ ನೇರವಾಗಿ ಆಗಲಿ, ಪರೋಕ್ಷ ವಾಗಿ ಆಗಲಿ ಕೈ ಹಾಕಿಲ್ಲ ಎಂದು ಈ ಸಭೆಯಲ್ಲಿ ಹೇಳಲಿ.

ಶ್ರೀ ಎಂ. ವಿ. ರಾಮ ರಾವ್.—ಖಂಡಿತವಾಗಿಯೂ ಆ ರೀತಿ ಕೈ ಹಾಕಿಲ್ಲ ಎಂದು ಹೇಳಬಲ್ಲೆ, ಬೇಕಾದರೆ ಅದಕ್ಕೆ ಅವರು ನಿದರ್ಶನ ಕೊಡಲಿ.

ಶ್ರೀ ಕೆ. ಲಕ್ಕಪ್ಪ.—ನಾನು ಬಹಳ ನೊಂದ ಮನಸ್ಸಿನಿಂದ ಹೇಳುತ್ತಾ ಇದ್ದೇನೆ, ಎಲ್ಲಾ ಬಾರ್ ಅಸೋಸಿಯೇಷನ್‌ಗಳಲ್ಲೂ ಅನುಭವವನ್ನು ಪಡೆದಿರತಕ್ಕ ಮೇಧಾವಿಗಳು ಬಹಳ ಜನರು ಇದ್ದರೂ ಕೂಡ ಅವರಿಗೆ ಅವಕಾಶ ಇಲ್ಲದೇ ಇರತಕ್ಕ ಪರಿಸ್ಥಿತಿ, ಹಿಂದುಳಿದ ಜನರಿಗೆ ಅವಕಾಶವಿಲ್ಲದೇ ಇರತಕ್ಕ ಪರಿಸ್ಥಿತಿ ಉಂಟುಮಾಡಿರುವುದು ನಮ್ಮ ನ್ಯಾಯಾಂಗ ಇಲಾಖೆಯ ದಕ್ಷತೆಯೇ? ಇದು ಅವರ ಒಳ್ಳೆಯ ನೀತಿಯೇ? ನಮ್ಮ ದೇಶವನ್ನು ಮತ್ತು ರಾಜ್ಯಾಂಗವನ್ನು ರಕ್ಷಣೆ ಮಾಡತಕ್ಕ ರೀತಿ ಯಲ್ಲಿ ಈ ದಿವಸ ನೇಮಕಗಳು ಸರಿಯಾದ ರೀತಿಯಲ್ಲಿ ಆಗಿಲ್ಲ ಎಂಬುದನ್ನು ಈ ಸಭೆಯಲ್ಲಿ ಬಹಳ ವಿಷಾದದಿಂದ ಹೇಳುತ್ತೇನೆ. ತುಮಕೂರು ಕೋರ್ಟಿನಲ್ಲಿ ಸುಮಾರು 3-4 ತಿಂಗಳಿನಿಂದ ಮ್ಯಾಜಿ ಸ್ಟ್ರೇಟರ ನೇಮಕವನ್ನು ಮಾಡಿಲ್ಲ ಇಮವರೆಗೂ. ನೂರಾರು ಕೇಸುಗಳು ಈ ದಿವಸ ತೀರ್ಮಾನವಾ ಗದೇ ನಿಂತಿವೆ.

Sri M. V. RAMA RAO.—The Hon'ble Member knows that posting of Munsiffs and Magistrates is to be made by the High Court. It is not done by the Government.

ಶ್ರೀ ಕೆ. ಲಕ್ಕಪ್ಪ.—ಸ್ವಾಮಿ, 6ನೇ ಸೆಕ್ಷನ್‌ನ್ನು ತಿದ್ದುಪಡಿ ಮಾಡಿ ಹೈಕೋರ್ಟಿನವರು ನೇರವಾಗಿ ನೇಮಕಮಾಡುವುದಕ್ಕೆ ಅಡ್ಡಿ ಅತಂಕಗಳನ್ನು ತಂದಿರುವುದನ್ನು ಮಾನ್ಯ ಸಚಿವರ ಗಮನಕ್ಕೆ ತರಬಯ ಸುತ್ತೇನೆ. ಹೈಕೋರ್ಟಿನವರು ಈ ಬಗ್ಗೆ ನೇಮಕ ಮಾಡಲು ಅಡ್ಡಿ ತರತಕ್ಕ ನ್ಯಾಯಾಂಗ ಇಲಾಖೆ ಏನಿದೆ ಅದನ್ನು ಈ ದಿವಸ ಪ್ರಶ್ನಿಸುತ್ತೇನೆ. ನೇಮಕ ಮಾಡುವುದಕೆ ಅವಕಾಶವಿಲ್ಲದ ರೀತಿಯಲ್ಲಿ ಅವರು ಮಾಡುತ್ತಾ ಇರುವುದು ಬಹಳ ತಪ್ಪು. ಯಾವ ಸರ್ಕಾರವೇ ಆಗಲಿ ನ್ಯಾಯವನ್ನು ಅತಿ ಜಾಗ್ರತೆಯಾಗಿ ದೊರಕಿಸಿಕೊಡಬೇಕು. ಅಂತಹ ಪರಿಸ್ಥಿತಿಯನ್ನು ನ್ಯಾಯಾಂಗ ಇಲಾಖೆ ಮಾಡುತ್ತಾ ಇಲ್ಲ. ಸ್ವಾಮಿ ನ್ಯಾಯಾಂಗ ಇಲಾಖೆಯಲ್ಲಿ ಅದಕ್ಷತೆ ಎಷ್ಟು ಮಟ್ಟಿಗೆ ಇದೆ ಎಂಬುದನ್ನು ನಾನು ಅಂಕಿ ಅಂಶಗಳ ಮೂಲಕ ಬೇಕಾದರೆ ಹೇಳಬಯಸುತ್ತೇನೆ. ಸರ್ಕಾರದ ವಿರುದ್ಧವಾಗಿ ಹೋಗಿರ ತಕ್ಕ ಅನೇಕ ರಿಟ್ ಅರ್ಜಿಗಳು ಇವೆ, ಅದರಲ್ಲಿ ಸರ್ಕಾರದ ಆಡಳಿತವನ್ನು ಲೋಪದೋಷ ಗಳನ್ನು ಟೀಕೆ ಮಾಡಿ ಹೈಕೋರ್ಟಿನವರು ಬರೆದಿದ್ದಾರೆ. ಆದರೂ ಕೂಡ ಅವನ್ನು ನ್ಯಾಯಾಂಗ ಇಲಾಖೆಯವರು ತಿದ್ದಿಕೊಳ್ಳದೆ, ಸರಿಯಾದ ರೀತಿಯಲ್ಲಿ ವಿಮರ್ಶೆಯನ್ನು ಮಾಡದೇ ಹೈಕೋರ್ಟಿಗೆ ರಿಟ್ ಹೋಗುವುದನ್ನು ಬೆಳೆಸತಕ್ಕದ್ದು ದಕ್ಷತೆಯ ಅಭಾವವಲ್ಲವೇ? ಈ ದಿವಸ ನ್ಯಾಯಾಂಗ ಇಲಾ ಖೆಯಲ್ಲಿ ಆಗುತ್ತಾ ಇರತಕ್ಕ ನ್ಯೂನತೆಗಳನ್ನು ತಪ್ಪಿಸಿ ಅದನ್ನು ಪುನರುತ್ತೇಜನಗೊಳಿಸಬೇಕೆಂದು ಹೇಳಿ ನನಗೆ ಒಂದೆರಡು ಮಾತುಗಳನ್ನು ಆಡಲು ಅವಕಾಶ ಕೊಟ್ಟದ್ದಕ್ಕಾಗಿ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

Sri R. S. HEGDE (Honnavar).—One clarification. There are many writs in High Courts and what is the percentage of success?

Sri K. LAKKAPPA.—I am talking about the writ petitions against the Government.

† ಶ್ರೀ ಬಿ. ಬಸವಯ್ಯ (ಕೊಳ್ಳೇಗಾಲ).—ಮಾನ್ಯ ಅಧ್ಯಕ್ಷರೇ, ನಮ್ಮ ನ್ಯಾಯಾಂಗ ಸಚಿವರು ತಂದಿರತಕ್ಕ 3,9,11 ಈ ಡಿಮ್ಯಾಂಡುಗಳನ್ನು ಸ್ವಾಗತಿಸುತ್ತಾ ಮೂರನೆಯ ಡಿಮ್ಯಾಂಡ್ ಅದ ಅಬ್ಕಾರಿಗೆ ಸಂಬಂಧಪಟ್ಟ ಖಾತೆಯ ಮೇಲೆ ನನ್ನ ಕೆಲವು ಅಭಿಪ್ರಾಯಗಳನ್ನು ಸೂಚಿಸಬಯಸು ತ್ತೇನೆ.

ಸ್ವಾಮಿ, ಈ ತನಕ ನಾನು ಬಹಳ ಶಾಂತವಾಗಿ ಅಬ್ಕಾರಿ ವಿಷಯದಲ್ಲಿ ಬಹಳ ಜನ ಮಾತನಾಡಿದ್ದನ್ನು ಕೇಳಿದೆ. ಅದರಲ್ಲೂ ವಿರೋಧ ಪಕ್ಷದ ಸದಸ್ಯರು ಪಾನನಿರೋಧ ಯಶಸ್ವಿಯಾಗಿಲ್ಲ, ಇದನ್ನು ಸ್ಕ್ರಾಪ್‌ಮಾಡುವುದು ಬಹಳ ಸೂಕ್ತ ಎಂಬ ಅಭಿಪ್ರಾಯದಲ್ಲಿ ಮಾತನಾಡಿದರು. ನಾನು ಪಾನನಿರೋಧ ಯಶಸ್ವಿಯೇ ಅಥವಾ ಅಲ್ಲವೇ ಎಂಬ ವಿಷಯಕ್ಕೆ ಹೋಗುವುದಿಲ್ಲ. ಆದರೆ ಅದಕ್ಕೆ ಅವರು ಹೇಳತಕ್ಕ ರೀತಿಯಲ್ಲಿ ಅಬ್ಜೆಕ್ಟೀವ್ ಟೆಸ್ಟ್ ಏನಿದೆಯೋ ಗೊತ್ತಿಲ್ಲ. ಅವರು ಕೊಟ್ಟಂತಹ ಕಾರಣ ಏನಾಗಿತ್ತು ಎಂದರೆ ಮೊದಲನೆಯದು ಕಳ್ಳಭಟ್ಟಿ, ಎರಡನೆಯದು ಕಾನೂನು ಭಂಗವಾಗುತ್ತಾ ಇದೆ ಎನ್ನುವುದು, ಮೂರನೆಯದು ಬ್ರೈಬರಿ, ಲಂಚ ರುಷವತ್ತು ತಾಂಡವಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದೆ ಎನ್ನುವುದು. ಈ ಮೂರು ಕಾರಣಗಳಿಗಾಗಿ ಪಾನನಿರೋಧ ರದ್ದಾಗಬೇಕೆಂಬ ಅಭಿಪ್ರಾಯ ಕಂಡುಬಂದ ಹಾಗೆ ಆಯಿತು. ಈ ವಿಷಯದಲ್ಲಿ ನಾನು ಹೆಚ್ಚು ಹೇಳದೇ ಇದ್ದರೂ ಸಹ ಈ 3 ಕಾರಣಗಳೂ ಎಲ್ಲಿ ಎಕ್ಸೈಜ್ ಇತ್ತೋ, ಎಲ್ಲಿ ಶೇಂದೀ, ಸಾರಾಯಿ ಮಾರುತ್ತಾ ಇದ್ದಾರೆಯೋ ಅಂತಹ ಕಡೆ ಹೋಲಿಸಿ ಒಂದು ಚಿತ್ರವನ್ನು ಈ ಸಭೆಯ ಮುಂದೆ ಇಟ್ಟಿದ್ದರೇ ಆದರೆ ಇದರ ಅರ್ಥ ಚೆನ್ನಾಗಿ ಆಗಬಹುದು ಎಂದು ಕಾಣುತ್ತದೆ.

ಸ್ವಾಮಿ, ಕಳ್ಳಭಟ್ಟಿ ಎನ್ನುವುದು ಪಾನನಿರೋಧ ಇರುವ ಕಡೆ ಮಾತ್ರವಲ್ಲ, ಮತ್ತು ಪಾನನಿರೋಧ ಬಂದ ನಂತರ ಅಲ್ಲ ಅದು ಹುಟ್ಟಿದ್ದು. ಕಳ್ಳಭಟ್ಟಿ ಎನ್ನುವುದು ಎಕ್ಸೈಜ್ ಇದ್ದ ದಿವಸದಿಂದಲೂ ಸಹ ನಡೆದುಕೊಂಡು ಬಂದಿದೆ. ಟೇಕ್ ಚಂದ್ ಕಮಿಟಿ ಅಂತ ಹೇಳಿ ಒಂದು ಎನ್‌ಕ್ವೈರಿ ಕಮಿಟಿಯನ್ನು ನೇಮಕ ಮಾಡಿದ್ದರು, ಅವರು ಅವರ ವರದಿಯಲ್ಲಿ ಒಂದು ಅಂಶವನ್ನು ಉಲ್ಲೇಖಿಸಿದ್ದಾರೆ. ಅವರು ಮಧ್ಯಪ್ರದೇಶದಲ್ಲಿ ಯಾವ ರೀತಿ ಇದೆ ಎಂಬುದನ್ನು ಹೇಳಿದ್ದಾರೆ. ಇದ 1952 ರಲ್ಲಿ ಪರಿಶೀಲನೆ ಮಾಡಿದ್ದು. ಆಗ ಮಧ್ಯಪ್ರದೇಶದಲ್ಲಿ ಅರ್ಧಭಾಗ ಪ್ರೊಹಿಬಿಷನ್ ಇತ್ತು, ಇನ್ನು ಅರ್ಧಭಾಗ ವೆಟ್ ಆಗಿತ್ತು. ಅವರು ಇಲಿಸಿಟ್ ಡಿಸ್ಟಿಲೇಷನ್ ರಿಜಿಸ್ಟರ್ ಆದ ಕೇಸುಗಳು ಎಷ್ಟು ಎಂಬುದನ್ನು ಹೇಳಿದ್ದಾರೆ ಅದು ಈ ರೀತಿ ಇದೆ:

1947ರಲ್ಲಿ ಡ್ರೈ ಹಾಫ್‌ನಲ್ಲಿ 2104 ವೆಟ್ ಹಾಫ್‌ನಲ್ಲಿ 2598 ಕೇಸುಗಳು ರಿಜಿಸ್ಟರ್ ಆಗಿದೆ. ]

| | | | | | |
|---|---|---|---|---|---|
| 1948 | ,, | 2502 | ,, | 2830 | ,, |
| 1949 | ,, | 3615 | ,, | 3013 | ,, |
| 1950 | ,, | 1030 | ,, | 3494 | ,, |
| 1951 | ,, | 1117 | ,, | 3037 | ,, |
| 1952 | ,, | 1598 | ,, | 3130 | ,, |
| 1953 | ,, | 3331 | ,, | 4712 | ,, |
| 1954 | ,, | 3136 | ,, | 4971 | ,, |

ಆದ್ದರಿಂದ ಕಳ್ಳಭಟ್ಟಿ ಎಂದು ಹೇಳುವುದು ಡ್ರೈಏರಿಯಾದಲ್ಲಿ ಮಾತ್ರ ಇರತಕ್ಕ ಸಮಸ್ಯೆ ಅಲ್ಲ. ವೆಟ ಏರಿಯಾದಲ್ಲೂ ಸಹ ನಡೆಯುತ್ತಾ ಇದೆ. ಮತ್ತು ಟೇಕಚಂದ್ ಕಮಿಟಿಯವರು ಇತರ ಕಡೆಗಳಲ್ಲೂ ಸಹ ಯಾವ ರೀತಿ ಇದೆ ಎಂಬುದನ್ನು ಪರಿಶೀಲನೆ ಮಾಡಿದ್ದಾರೆ. ಪಂಜಾಬ್ ದೇಶದ ಒಂದೇ ಒಂದು ಜಿಲ್ಲೆಯಲ್ಲಿ ಡ್ರೈ ಇದೆ. ಉಳಿದ ಎಲ್ಲಾ ಕಡೆಯಲ್ಲೂ ಸಹ ವೆಟ್ ಇದ್ದರೂ ಕೂಡ ಸಮಾನ್ಯವಾಗಿ ಅಲ್ಲಿ 15 ಪಟ್ಟು ಕಳ್ಳಭಟ್ಟಿ ತಯಾರು ಮಾಡುವುದು ಇದೆ ಎಂದು ಅಲ್ಲಿನ ಎಕ್ಸೈಜ್ ಕಮಿಷನರ್ ಅವರು ಟೇಕ್‌ಚಂದ್ ಕಮಿಟಿ ಮುಂದೆ ಎವಿಡೆನ್ಸ್ ಕೊಡುತ್ತಾ ಹೇಳಿದ್ದಾರೆ. ಕಳ್ಳಭಟ್ಟಿ ಏಕೆ ನಡೆಯುತ್ತದೆ ಎಂಬ ಒಂದು ಪ್ರಶ್ನೆ ಇದೆ, ಪೋಲೀಸ್‌ನವರೇ ಅದನ್ನು ನಡೆಸುವವರು ಎಂಬ ನಂಬಿಕೆ ನನಗೆ ಇಲ್ಲ. ಏಕೆಂದರೆ ಕಳ್ಳಭಟ್ಟಿ ಮಾಡುವುದು ಯಾವಾಗ? ಎಲ್ಲಿತನಕ ನಾವು ಹಿಂದೆ ಇದ್ದ ಬ್ರಿಟಿಷರ ಎಕ್ಸೈಜ್ ಪಾಲಿಸಿಯನ್ನು ಇಟ್ಟು ಕೊಂಡಿರುತ್ತೇವೆಯೋ ಅಲ್ಲಿಯ ತನಕ ಕಳ್ಳಭಟ್ಟಿ ಇದ್ದೇ ಇರುತ್ತದೆ.

11-00 A.M.

ಸಾರಾಯಿ, ಹೆಂಡ ತಯಾರು ಮಾಡುವುದಕ್ಕೂ ಮಾರಾಟ ಮಾಡುವುದಕ್ಕೂ ಸಂಬಂಧ ವಿರುವುದಿಲ್ಲ. ಸರಕಾರದವರು ಹೆಚ್ಚು ಬಿಡ್ ಮಾಡುವವರಿಗೆ ಕೊಡುತ್ತಾರೆ. ಬಿಡ್ ಮಾಡಿದವರು ಕಳ್ಳಭಟ್ಟಿ ತಯಾರಿಕೆಯನ್ನು ಮತ್ತು ನ್ಯಾಯವಾದ ರೀತಿಯಲ್ಲಿ ತಯಾರಿಸಿದ ಮದ್ಯವನ್ನು ಬೆರಕೆ ಮಾಡಿ ಮಾರಲು ಅವಕಾಶವಿದೆ. ಹಾಗೆ ಅವರು ಮಾಡುತ್ತಿರುವುದರಿಂದ ಅವರೇ 'ಗ್ರೇಟೆಸ್ಟ್

(ಶ್ರೀ ಬಿ. ಬಸವಯ್ಯ)

ಅಡಲ್ಟರೇಟರ್ಸ್' ಎಂದು ಹೇಳಬೇಕಾಗುತ್ತದೆ. ರೀಟೈಲ್ ಸೇಲ್ ಆಗುವ ಕಡೆ ಕುಡಿಯುವವರೇ ಜಾಸ್ತಿ, ಶೇಕಡ 90 ಮಂದಿ ಬಾಟಲಿನಲ್ಲ ಬರುವುದನ್ನು ಕುಡಿಯುವುದಿಲ್ಲ. ರೀಟೈಲ್ ಶಾಪುಗಳಲ್ಲೇ ಕುಡಿಯುವುದು. ಹೆಚ್ಚು ಹಣಕ್ಕೆ ಬಿಡ್ ಮಾಡಿರುವುದರಿಂದ ಹರಾಜಿನಲ್ಲಿ ಕೊಂಡವರು ತಮ್ಮ ಹಣ ಸರಕಾರಕ್ಕೆ ಕೊಡಬೇಕಾಗಿರುವುದನ್ನು ಕಟ್ಟುವುದಕ್ಕಾಗಿ ಪಾನೀಯವನ್ನು ಅಡಲ್ಟರೇಟ್ ಮಾಡಿ ಮಾರುತ್ತಾರೆ. ಸೇಂದಿ ವಿಷಯದಲ್ಲಿ ಯಾವ ಇಲಾಖೆ ಹೇಗಿರಬೇಕೆಂದು ಆಕ್ಟಿನಲ್ಲಿ ಹೇಳಿದ್ದರೂ ಕೂಡ ಎಕ್ಸೈಜ್ ಆಕ್ಟಿನಲ್ಲಿರುವಂತೆ ಇದುವರೆಗೂ ನಡೆಯುತ್ತಿಲ್ಲ. ನನಗೆ ತಿಳಿದಮಟ್ಟಿಗೆ ದತ್ತೂರಿ ಬೀಜ ಹಾಕಿ ವಿಷ ಬೆರಸುತ್ತಿರುವುದರಿಂದ ಆರೋಗ್ಯ ಕೆಡುತ್ತಿದೆ. ಹೀಗೆ ನಡೆಯುತ್ತಿರುವುದಾಗಿ ಹೇಳುತ್ತಾರೆ. ಹೇಗಿದ್ದರೂ ಸರಿ, ಸಿಕ್ಕಿದರೆ ಸಾಕೆಂದು ಕುಡಿಯುವವರಿದ್ದಾರೆ. ಬಿಡ್ ಮಾಡುವವರೇ ಇಲ್ಲಿಸಿಟ್ ಲಿಕರ್‌ಗೆ ಅವಕಾಶ ಕೊಡುತ್ತಿರುವುದರಿಂದ ಪೋಲೀಸಿನವರಿಗೆ ಹಿಡಿಯಲು ಮಾತ್ರ ತಪ್ಪು ಮಾಡುವವರನ್ನು ಶಿಕ್ಷೆಗೆ ಗುರಿಪಡಿಸಲು ಸಾಧ್ಯವಿಲ್ಲ. ಪಾನನಿರೋಧವಿರುವ ಪ್ರದೇಶದಲ್ಲಿ ಸಾಮಾನ್ಯವಾಗಿ ಜನಸಾಮಾನ್ಯರು ಕುಡಿಯುವುದನ್ನು ಬಿಟ್ಟಿದ್ದಾರೆ. ಅದರೆ ಅಲ್ಲಿರುವ ಕೆಲವರು ಶ್ರೀಮಂತರು ಟ್ರ್ಯಾಪರ್ಸ್ ಮತ್ತು ಪೋಲೀಸಿನವರನ್ನು ಕೈಲಿಟುಕೊಂಡು ತಮ್ಮ ಚಟವನ್ನು ಬಿಡಲಾರದೆ ಕುಡಿಯುತ್ತಿದ್ದಾರೆ. ಇತರರು ಅಷ್ಟಾಗಿ ಕುಡಿಯುತ್ತಿಲ್ಲ; ಐಶ್ವರ್ಯವಂತರ ಪೈಕಿ ಕೆಲವರು ಕುಡಿಯುವುದನ್ನು ತಪ್ಪಿಸುವುದಕ್ಕಾಗುವುದಿಲ್ಲ. ಭೂಸುಧಾರಣೆ ಜಾರಿಗೆ ಬಂದರೆ ಸ್ವಲ್ಪಮಟ್ಟಿಗೆ ಯಜಮಾನಿಕೆ ಕಡಮೆಯಾದರೆ, ಹಿಡುವಳಿ ಕಡಮೆಯಾದರೆ ಮುಂದೆ ಅನುಕೂಲಸ್ಥರು ಕುಡಿಯುವುದನ್ನು ನಿಲ್ಲಿಸಬಹುದು. ಎಲ್ಲಾ ಕಡೆಯೂ ಕಳ್ಳಬಟ್ಟಿ ತಯಾರಿಕೆ ಇದೆ. ಪಾನನಿರೋಧ ಯಶಸ್ವಿಯಾಗಿಲ್ಲವೆಂದು ಹೇಳುವುದನ್ನು ಒಪ್ಪುವುದಕ್ಕಾಗುವುದಿಲ್ಲ.

ಎರಡನೆಯ ವಾದ ಕಾನೂನು ಭಂಗವಾಗುವುದು ಜಾಸ್ತಿಯಾಗಿದೆ ಎಂಬುದು ಯಾವ ಕಾನೂನೇ ಆಗಲಿ ಮತ ಸಂಬಂಧವಾದುದಾಗಲಿ ಅಥವಾ ಬೇರೆ ಯಾವುದೇ ಕಾನೂನಾಗಲಿ ಸೆಂಟ್ ಪರ್ಸೆಂಟ್ ಸರಿಯಾಗಿ ನಡೆಯುವುದು ಯಾವುದೂ ಇಲ್ಲ. ಸಿವಿಲ್ ಲಾಸ್ ಇದ್ದರೂ ಕೂಡ ಕೆಲವು ಜನರ ಹಕ್ಕು ಬಾಧ್ಯತೆಗಳು ಊರ್ಜಿತವಾಗಿರುವುದಿಲ್ಲ. ತೇಕ್‌ಚಂದ್ ಕಮಿಟಿಯವರು ಯಾವ ಯಾವ ಕಾನೂನು ಎಷ್ಟುಮಟ್ಟಿಗೆ ಭಂಗವಾಗುತ್ತಿದೆಯೆಂಬುದನ್ನು ಹೇಳಿದ್ದಾರೆ. ಮಧ್ಯ ಪ್ರದೇಶದ ಪಾನನಿರೋಧಕ್ಕೆ ಸಂಬಂಧಪಟ್ಟ ಎನ್‌ಕ್ವೈರಿ ಕಮಿಟಿಯವರು ಕೊಟ್ಟಿರುವ ಅಂಕಿಅಂಶಗಳು ಈ ರೀತಿ ಇವೆ: 1938ರಲ್ಲಿ ಎಕ್ಸೈಜ್ ಆಕ್ಟಿನ ಪ್ರಕಾರ ಎಷ್ಟು ಕೇಸುಗಳು ರಿಜಿಸ್ಟರಾಗಿವೆ, ಎಷ್ಟು ಆಡ್ಮಿಟ್ ಆಗಿವೆ ಎಂಬುದನ್ನು ಹೇಳಿರುವುದು ಈ ರೀತಿ ಇದೆ; 1938ರಲ್ಲಿ 325 ಕೇಸುಗಳಾಗಿವೆ, 1947ರಲ್ಲಿ 15 6 ಕೇಸುಗಳು 1948ರಲ್ಲಿ 1,329 ಕೇಸುಗಳು, 1949ರಲ್ಲಿ 629 ಕೇಸುಗಳು ರಿಜಿಸ್ಟರಾಗಿವೆ. ಎಕ್ಸೈಜು ಆಕ್ಟ್ ಪ್ರಕಾರ ಕೇಸಸ್ ಈ ರೀತಿ ಇವೆ: 1938ರಲ್ಲಿ 3,115, 1947ರಲ್ಲಿ 3,920 1948ರಲ್ಲಿ 4,7 3 ಮತ್ತು 1949ರಲ್ಲಿ 5298 ಕೇಸುಗಳು ಎಕ್ಸೈಜು ಆಕ್ಟಿನ ಉಲ್ಲಂಘನೆಗೆ ಸಂಬಂಧಪಟ್ಟಿವೆ. ಪಾನನಿರೋಧಕ್ಕೆ ಸಂಬಂಧಪಟ್ಟ ಆಕ್ಟಿನ ಪ್ರಕಾರ 1947ರಲ್ಲಿ 4,881 ಕೇಸುಗಳು ರಿಜಿಸ್ಟರಾಗಿವೆ, 1948ರಲ್ಲಿ 5,965, 1949ರಲ್ಲಿ. 6,800 ಕೇಸುಗಳು ರಿಜಿಸ್ಟರಾಗಿವೆ. ಪೋಲೀಸ್ ಆಕ್ಟ್ ಪ್ರಕಾರ 1938ರಲ್ಲಿ ಕಾನೂನನ್ನು ಉಲ್ಲಂಘಿಸಿರುವ ಸಂಬಂಧದಲ್ಲಿ ಆಗಿರುವ ಕೇಸುಗಳ ಸಂಖ್ಯೆ ಈ ರೀತಿ ಇದೆ: 19 8ರಲ್ಲಿ 4,015 1917ರಲ್ಲಿ 7,084, 1 48ರಲ್ಲಿ 12,028, 1949ರಲ್ಲಿ 12,024. ಲೀಗಲ್ ಮತ್ತು ಸ್ಪೆಷಲ್ ಲಾಸ್‌ಗೆ ಸಂಬಂಧಪಟ್ಟಂತೆ ಶಾಸನ ಭಂಗವಾಗಿ ದಾಖಲಾಗಿರುವ ಕೇಸುಗಳ ಸಂಖ್ಯೆ ಈ ರೀತಿ ಇದೆ: 1938ರಲ್ಲಿ 28,548, 1947ರಲ್ಲಿ 58,838, 1948ರಲ್ಲಿ 65,678, 194 ರಲ್ಲಿ 74,647 ಕಾನೂನು ಎಷ್ಟು ಸಂದರ್ಭಗಳಲ್ಲಿ ಭಂಗವಾಗಿದೆಯೆಂದು ಈ ಅಂಕಿ ಸಂಖ್ಯೆಗಳ ಆಧಾರದಮೇಲೆ ಪಾನನಿರೋಧ ಯಶಸ್ವಿಯಾಗಿಲ್ಲ ಎಂದು ಹೇಳುವುದಾದರೆ ಕಾನೂನು ಉಲ್ಲಂಘನೆಯಾಗಿರುವ ಸಂದರ್ಭಗಳು ಅನೇಕ ಶಾಸನಗಳಿಗೆ ಸಂಬಂಧಪಟ್ಟಿವೆ. ಅದರಲ್ಲೂ ಸಮಾಜ ಸುಧಾರಣೆ, ಅಸ್ಪೃಶ್ಯತೆ, ಪಾನನಿರೋಧ, ಪ್ರಾಸ್ಟಿಟ್ಯೂಷನ್ ಮುಂತಾದ ಸಾಮಾಜಿಕ ಸುಧಾರಣೆಗೆ ಸಂಬಂಧಪಟ್ಟ ಕಾನೂನುಗಳಲ್ಲಿ ಯಾವುದೂ ಕೂಡ ಪಾನನಿರೋಧದ ಕಾನೂನಿಗಿಂತಲೂ ಹೆಚ್ಚು ಯಶಸ್ವಿಯಾಗಿಲ್ಲ, ಪೋಲೀಸು ಆಕ್ಟ್, ಲೀಗಲ್ ಅಂಡ್ ಸ್ಪೆಷಲ್ ಲಾಸ್, ಎಕ್ಸೈಜ್ ಆಕ್ಟ್ ಇವುಗಳಿಗೆ ಸಂಬಂಧಪಟ್ಟ ಹಾಗೆ ಹೆಚ್ಚಾಗಿ ಕಾನೂನು ಭಂಗವಾಗಿದೆ. ಅದೇ ರೀತಿ ಕ್ರಿಮಿನಲ್ ಕೋಡಿನ ಸಂಬಂಧದಲ್ಲೂ ನಡೆಯುತ್ತಾ ಇದೆ. ಇದೆಲ್ಲಾ ನೋಡಿದರೂ ಕೂಡ ಪಾನನಿರೋಧ ಯಶಸ್ವಿಯಾಗಿದೆ ಎಂದು ಹೇಳಬಹುದು.

ಮೂರನೆಯದು ಈ ಇಲಾಖೆಯಲ್ಲಿ ಲಂಚದ ಹಾವಳಿ ಜಾಸ್ತಿಯಾಗಿದೆ ಎಂಬುದು. ಇದನ್ನು ಅನೇಕರು ಹೇಳಿದರು. ವೆಟ್ ಏರಿಯಾದಲ್ಲಾಗುತ್ತಿರುವಷ್ಟೇ ಕೇಸುಗಳು ಡ್ರೈ ಏರಿಯಾದಲ್ಲೂ ಆಗುತ್ತಿವೆ. ನಮ್ಮ ಜಿಲ್ಲೆಯಲ್ಲಿ ನಾನು ನೋಡಿದಂತೆ ಮೊದಲು ಬಿಡ್ಡರ್ಸ್ ಮತ್ತು ಕಂಟ್ರಾಕ್ಟರು

ಗಳಲ್ಲಿ ಪ್ರಾರಂಭವಾಗಿ ನಂತರ ಮಂತ್ರಿಮಂಡಲ ಮತ್ತು ಸರಕಾರದಮಟ್ಟದವರೆಗೂ ಹೋಗಿದೆ. ಟೈಂಸ್ ಆಫ್ ಇಂಡಿಯಾದಲ್ಲಿ ಒಬ್ಬ ಕಂಟ್ರಾಕ್ಟರು 20 ಲಕ್ಷ ಕೊಡಲು ಹೋಗಿದ್ದನೆಂದು ವರದಿಯಾಗಿದೆ. ಟ್ರೀ ಮಾರ್ಕರ್ಸ್ ಎನ್ನುವವರು ಬೇರೆ ಇದ್ದಾರೆ. ಅವರು 10 ಮರ ಮಾರ್ಕ್ ಮಾಡಿರುವುದಾಗಿ ಹೇಳಿ 100 ಮರಗಳಿಗೆ ಅವಕಾಶ ಕೊಡುತ್ತಾರೆ. ಹೀಗೆ ಆ ಮಟ್ಟದಿಂದಲೂ ಲಂಚ ತೆಗೆದುಕೊಳ್ಳುವುದು ಪ್ರಾರಂಭವಾಗಿದೆ. ಎಕ್ಸೈಜು ಇಲಾಖೆಯಲ್ಲಿ ಶೇಕಡ 5 ಮಂದಿ ಪೋಲೀಸಿನವರು ಮಾತ್ರ ಲಂಚಕೋರರಾಗಿದ್ದಾರೆ. ಲಂಚದ ಹಾವಳಿ ಇಲ್ಲ ಎಂದು ಹೇಳುವುದು ಸರಿಯಲ್ಲ, ಪಾನನಿರೋಧಕ್ಕೆ ಸಂಬಂಧಪಟ್ಟ ಹಾಗೆ ಅನುಭವದಿಂದ ನನ್ನ ಜಿಲ್ಲೆಯ ಮಟ್ಟಿಗೆ ಹೇಳುವುದಾದರೆ ನನ್ನ ತಾಲ್ಲೂಕಿನಲ್ಲಿ ವರ್ಸ್ಟ್ ವಿಕ್ಟಿಂಸ್ ಇದ್ದಾರೆ. ನಂಜನಗೂಡು ಸಬ್‌ಡಿವಿಜನ್ ಮತ್ತು ಮೈಸೂರು ಡಿವಿಜನ್ನಿನಿಂದ ಸರಕಾರಕ್ಕೆ ಹೆಚ್ಚು ಲಾಭ ಬರುತ್ತಿದೆ. ಸೇಂದಿ ಮತ್ತು ಸಾರಾಯಿನಿಂದ ಈ ತೆರಿಗೆ ಹೆಚ್ಚಾಗಿ ಬರುವುದು. ಸುಮಾರು ಶೇಕಡ 75 ಭಾಗ ಬರುವುದು. ಸೇಂದಿ ಮತ್ತು ಸಾರಾಯಿಯನ್ನು ಹೆಚ್ಚಾಗಿ ಉಪಯೋಗಿಸುವವರು ಲೇಬರರ್ ಇನ್ ದಿ ಫೀಲ್ಡ್ ಮತ್ತು ಕಾರ್ಖಾನೆಗಳಲ್ಲಿರುವವರು ಶೇಕಡ 80 ಭಾಗ ಅವರು ಕುಡಿಯುತ್ತಿದ್ದಾರೆ, ಚಿತ್ರದುರ್ಗದ ಹರಿಜನ ಕೇರಿಯಲ್ಲಿ ಹಿಂದೆ ರಾತ್ರಿ ವೇಳೆ ದೀಪವೇ ಹತ್ತಿಸುತ್ತಿರಲಿಲ್ಲ, ಈ ದಿವಸ ದೀಪ ಹತ್ತಿಸುವ ಸಂಭವವಿದೆ. ನನ್ನ ತಾಲ್ಲೂಕಿನಲ್ಲಿ ಸಾಯಂಕಾಲ ಕುಡಿಯುವುದಕ್ಕೆ ಗಂಜಿ ಮಾಡಿಕೊಂಡು ಒಂದು ಹೊತ್ತು ಊಟ ಮಾಡುತ್ತಿದ್ದರು. ಈಗ ಅವರು ಎರಡು ಹೊತ್ತು ಊಟ ಮಾಡುತ್ತಾರೆ. ಹುಡುಗರು ಕೇಳಿದರೆ ಬಳಪಕ್ಕೆ ಎರಡು ಪೈಸೆ ಕೊಡುವ ಶಕ್ತಿ ಅವರಿಗೆ ಬಂದಿದೆ. ಹರಿಜನರಿಗೆ ಮತ್ತು ಲೇಬರರ್ಸ್‌ಗೆ ಈ ದಿನ ನಿಜವಾಗಿಯೂ ಕೂಡ ಸಾಕಷ್ಟು ಉಪಯೋಗವಾಗಿರುವುದಾದರೆ ಪಾನನಿರೋಧದಿಂದ ಆಗಿದೆ, ವೆಲ್‌ಫೇರ್ ಇಲಾಖೆಯಿಂದ ಅಷ್ಟಾಗಿ ಆಗಿಲ್ಲ ಎಂದು ಹೇಳಬಹುದು.

ಸ್ವಾಮಿ, ಎಕ್ಸೈಜ್ ಬಾಬಿನಲ್ಲಿ ತೆರಿಗೆಗಳಿಂದ ವರಮಾನವನ್ನು ಹೆಚ್ಚಿಸಿಕೊಳ್ಳಬೇಕಾದರೆ ಬೇರೆ ದೇಶಗಳಲ್ಲಿರುವಂತೆ ತೆರಿಗೆ ಪದ್ಧತಿಯನ್ನು ತರುವುದಕ್ಕೆ ತಯಾರಾಗಿದ್ದಾರೆಯೇ ಎಂದು ಕೇಳುತ್ತೇನೆ. ನಮ್ಮಲ್ಲಿ ಈವಾಗ ಬರತಕ್ಕ 3 ಕೋಟಿ 85 ಲಕ್ಷ ರೂಪಾಯಿ ಎಕ್ಸೈಜ್ ವರಮಾನದಲ್ಲಿ ಷಾಪ್‌ರೆಂಟ್ ಮತ್ತು ಟ್ರೀ ಟ್ಯಾಕ್ಸ್, ಷಾಪ್‌ರೆಂಟ್ ಆನ್ ಕಂಟ್ರಿ ಲಿಕರ್ಸ್ ಸೇರಿ ಮೂರು ಕೋಟಿ ರೂಪಾಯಿ ಬರುತ್ತಿದೆ. ಒಂದು ಬಾಟಲ್ ಲಿಕರ್ ತಯಾರು ಮಾಡಬೇಕಾದರೆ ಒಂದು ರೂಪಾಯಿ ಆಗುವುದಕ್ಕೆ 11 ರೂಪಾಯಿ ಟ್ಯಾಕ್ಸ್ ಬೀಳುತ್ತದೆ, ಒಂದು ಬಾಟಲ್ ಬೆಲೆ 15 ರಿಂದ 52 ರೂಪಾಯಿಗಳವರೆಗೂ ಇದೆ ಎಂದು ಹೇಳುತ್ತಾರೆ. ಆದುದರಿಂದ ಇದನ್ನು ಕುಡಿಯುವವರೆಲ್ಲ ಟ್ಯಾಕ್ಸ್ ಕೊಡುತ್ತಾರೆ. ಇಂಥ ತೆರಿಗೆಯನ್ನು ಹಾಕುವುದು ಸಮಾಜವಾದ ರಾಷ್ಟ್ರ ಎನ್ನಿಸಿಕೊಂಡಿರುವ ನಮ್ಮ ಸರ್ಕಾರಕ್ಕೆ ಒಳ್ಳೆಯದಲ್ಲ. ದಯವಿಟ್ಟು ಈ ತೆರಿಗೆಯನ್ನು ತೆಗೆಯಿರಿ. ಅದರಿಂದ ಜನ ಸಾಮಾನ್ಯನಿಗೆ ಅನುಕೂಲವಾಗುತ್ತದೆ ಎಂದು ಹೇಳುತ್ತೇನೆ.

ಪಾನನಿರೋಧದ ವಿಚಾರದಲ್ಲಿ ಒಂದು ಮಾತನ್ನು ಹೇಳುತ್ತೇನೆ ಸ್ವಾಮಿ ? ನನ್ನ ಭಾಗದಲ್ಲಿ ಯಾರು ಈ ಉದ್ಯಮದಲ್ಲಿ ತೊಡಗಿದ್ದಾರೆ ಎನ್ನುವುದು, ಆ ಮನೆಗಳೂ ನಮಗೆ ಗೊತ್ತು ? ಆದರೂ ಸಹ ಪೋಲೀಸಿನವರಿಗೆ ಹೇಳಿದಾಗ ಅವರು ಹೇಳಿದರು : ನಾವು ಏನು ಮಾಡುವುದು, ಚೆಕ್ ಮಾಡುವುದಕ್ಕೆ ಮುಖ್ಯ ಮಂತ್ರಿಗಳು ತೆಗೆದುಹಾಕಿ ಎಂದು ಹೇಳಿದ್ದಾರಲ್ಲ ಎಂದು ಹೇಳುವ ಮಟ್ಟಿಗೆ ಬಂದಿದೆ. ಇಂಥವರು ಚೆಕ್ ಮಾಡುವುದಕ್ಕೆ ನಮ್ಮಲ್ಲಿ ನಾವೇ ಒಂದು ವಾಲಂಟರಿ ಆರ್ಗನೈಜೇಷನ್ ಇಟ್ಟುಕೊಂಡಿದ್ದೇವೆ. ಮುಖ್ಯ ಮಂತ್ರಿಯವರಲ್ಲಿ ಒಂದು ಪ್ರಾರ್ಥನೆ ಏನೆಂದರೆ ಈ ಬಗ್ಗೆ ಅವರ ವೈಯಕ್ತಿಕ ಭಾವನೆ ಏನೇ ಇದ್ದರೂ ಕೂಡ ಸರ್ಕಾರದ ನೀತಿಯನ್ನು ಹೇಳುವಾಗ, ಈ ರೀತಿಯ ಅಭಿಪ್ರಾಯ ಜನರಲ್ಲಿ ಉಂಟಾಗುವಂತೆ ಹೇಳಬಾರದು.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ (ತಿಪಟೂರು).—ಸ್ವಾಮಿ, ಮಾನ್ಯ ಸದಸ್ಯರು ಹೇಳಿದ್ದನ್ನು ನಾವು ತೀವ್ರಾಸಕ್ತಿಯಿಂದ ಕೇಳಿದೆ. ದೇಶದಲ್ಲಿ ಪಾಷಾಣ ಮತ್ತು ಮನುಷ್ಯ ತಿಂದು ಸಾಯುವುದಕ್ಕೆ ಬೇಕಾದ್ದು ಎಲ್ಲವೂ ಇದೆ. ಆದರೆ ಯಾರು ಕೂಡ ಪಾಷಾಣವನ್ನು ತೆಗೆದುಕೊಂಡು ಹೋಗಿ ತಿಂದು ಸಾಯಿರಿ ಎಂದು ಹೇಳುವುದಿಲ್ಲ. ಬುದ್ಧಿವಂತರಾದವರು ಸಮಾಜದಲ್ಲಿ ಇಂಥದ್ದನು ಮಾಡಬಾರದು ಎಂದು ವಿವೇಚನೆ ಬರುವಂತೆ ಬೋಧೆ ಮಾಡಿ ಅವರನ್ನು ಉತ್ತಮ ಗತಿಗೆ ತರುವುದಕ್ಕೆ ಸಮಾಜ ಸೇವಕರು ಮತ್ತು ನಮ್ಮ ಮಾನ್ಯ ಸದಸ್ಯರಂಥ ಸಮಾಜ ಸುಧಾರಕರೂ ಸಾಕಷ್ಟು ಪ್ರಯತ್ನ ಪಡಬೇಕು. ಈ ಪ್ರಪಂಚದಲ್ಲಿ ದೈವ ಸೃಷ್ಟಿಯಲ್ಲಿ ಹುಟ್ಟಿರತಕ್ಕ ಮರ, ಗಿಡ, ಬಳ್ಳಿ, ವಿಷ, ಮತ್ತೊಂದು, ಮಗದೊಂದು ಅದನ್ನು ಯಾರಾದರೂ ಬಚ್ಚಿಟ್ಟು ಕಾನೂನು ಮಾಡಿ ಕುಡಿಯಬಾರದು ಎಂದು ಹೇಳಿದ ಮಾತ್ರಕ್ಕೆ ಯಾವುದೋ ಕಾಡಿನಲ್ಲಿ ಯಾವುದೋ ಮೂಲೆಯಲ್ಲಿ ಕುಡಿಯುವವರನ್ನು ಕುಡಿಯದ ಹಾಗೆ ಇಡುತ್ತೇವೆ ಎನ್ನುವುದಾದರೆ ಎಷ್ಟು ಪೋಲೀಸ್ ಸಿಬ್ಬಂದಿ ಬೇಕು ? ಈ ಸರ್ಕಾರದಲ್ಲಿರುವ ಬೊಕ್ಕಸವೆಲ್ಲವನ್ನೂ ಅದಕ್ಕೆ ಖರ್ಚು ಮಾಡಿದರೂ ಹಾಗೆ ಮಾಡುವುದು ಅಸಾಧ್ಯ. ಇದು

(ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ)

ಕಲಿಯುಗವಲ್ಲವೇ. ಪಾನನಿರೋಧವನ್ನು ಸಂಪೂರ್ಣವಾಗಿ ಜಾರಿಗೆ ತಂದು ಜನಗಳನ್ನು ಉದ್ಧಾರ ಮಾಡುತ್ತೇವೆ ಎನ್ನುವುದಾದರೆ ಅದನ್ನು ಭಾಷಣಕ್ಕಾಗಿ ಇಟ್ಟುಕೊಂಡಿರಬೇಕು ಎನ್ನುವುದು ನನ್ನ ಭಾವನೆ.

ಇವತ್ತು ಬೆಂಗಳೂರಿನಲ್ಲಿ ಪಾನನಿರೋಧ ಜಾರಿಯಲ್ಲಿಲ್ಲ. ಎಲ್ಲರೂ ಕುಡಿದು ಬಂದಿದ್ದಾರೆಯೇ ? ನಾವೆಲ್ಲ ಕುಡಿದು ಬಂದಿದ್ದೇವೆಯೇ ? ಯಾರು ಅದರ ಅಭ್ಯಾಸವನ್ನು ಇಟ್ಟುಕೊಂಡಿರುತ್ತಾರೆಯೋ ಆ ಜನ ಮಾತ್ರ ಕುಡಿಯುತ್ತಾರೆ. ಪಾನನಿರೋಧವನ್ನು ತಗೆದ ಮಾತ್ರಕ್ಕೆ ಎಲ್ಲರೂ ಕುಡಿಯುತ್ತಾರೆ ಎನ್ನುವುದನ್ನು ನಾನು ಒಪ್ಪುವುದಿಲ್ಲ. ಇದನ್ನು ಅವರೇ ಯೋಚನೆ ಮಾಡಬೇಕು.

ಪಾನನಿರೋಧವನ್ನು ಕಟ್ಟುನಿಟ್ಟಾಗಿ ಜಾರಿಗೆ ತರುತ್ತೀರಾ ಎಂದು ಯೋಚನೆ ಮಾಡೋಣ. ನಮ್ಮ ಪಕ್ಕದ ಪ್ರಾಂತಗಳಾದ ಮದ್ರಾಸ್ ಮತ್ತು ಆಂಧ್ರ ಪ್ರಾಂತ್ಯಗಳಲ್ಲಿ ನೀರಾ ಕೇಂದ್ರಗಳಿವೆ. ಅಲ್ಲಿ ಹೋದರೆ 15 ಪೀಪಾಯಿ ಸೇಂದಿ ಇರುತ್ತದೆ. ಅಲ್ಲಿ ಗಾಂಧಿ ಫೋಟೋ ಕೂಡ ಇರುತ್ತದೆ. ನಮ್ಮಲ್ಲಿ ಯಾವುದೇ ನೀರಾವರಿ ಯೋಜನೆಯನ್ನು ತೆಗೆದುಕೊಳ್ಳಬೇಕಾದರೂ ಹಣವಿಲ್ಲ ಎಂದು ಹೇಳುತ್ತಾರೆ. ಆದರೆ ಆಂಧ್ರದಲ್ಲಿ ನಾಗಾರ್ಜುನ ಸಾಗರವನ್ನು ಯಾರಿಗೂ ಹೇಳದೆ ಕಟ್ಟಿಸಿಟ್ಟರು. ಹಾಗೆಯೇ ನಮ್ಮಲ್ಲಿಯೂ ಅಭಿವೃದ್ಧಿ ಕೆಲಸ ಆಗಬೇಕು ಎನ್ನುವುದಾದರೆ ಪಾನನಿರೋಧವನ್ನು ತೆಗೆದುಬಿಡಿ. ಹೆಚ್ಚು ಬೆಲೆ ಬಾಳುವ ಲಿಕರ್ಸ್ 50 ರೂಪಾಯಿ, 20 ರೂಪಾಯಿ ಇಂಥವನ್ನು ಬೇಕಾದರೆ ತೆಗೆದುಬಿಡಿ. ಆದರೆ ಸಾಮಾನ್ಯ ಬಡವರಿಗೆ ಮತ್ತು ಕೂಲಿಕಾರರಿಗೆ ಮತ್ತು ಇತರ ಶ್ರಮಜೀವಿಗಳಿಗೆ, ಅವರ ಶ್ರಮವನ್ನು ನೀಗಿಸಲು ಅಲ್ಪಸ್ವಲ್ಪ ಕುಡಿಯುವುದಕ್ಕೆ ಸೇಂದಿ ಸಿಕ್ಕದೆ ತೆಗೆಯಬೇಡಿ. ಗಾಂಧೀಜಿ ಅವರ ಮೊಮ್ಮಕ್ಕಳು, ಅವರು ಹೇಳಿದಂತೆ ಮಾಡುತ್ತೇವೆ ಎಂದು ಕೆಲವರು ಹೇಳುತ್ತಾರೆ. ಹಾಗಾದರೆ ಗಾಂಧೀಜಿ ಅವರು ಹೇಳಿದುದೆಲ್ಲವನ್ನೂ ನಡೆಸಿದ್ದೀರಾ, ಆ ದಾರಿಯಲ್ಲಿ ಹೋಗುವುದಕ್ಕೆ ಮಾತ್ರ ಪ್ರಯತ್ನಪಡುತ್ತಿದ್ದೀರಿ. ಅವರ ಅನುಯಾಯಿಗಳು ಯಾರಿಗೂ ಕೂಡ ಅವರು ಹೇಳಿದುದನ್ನು ನಡೆಸುವುದಕ್ಕಾಗಿಲ್ಲ.

ಪೋಲೀಸರಿಂದ ಪಾನನಿರೋಧವನ್ನು ಜಾರಿಗೆ ತರುವುದಕ್ಕೆ ಸಾಧ್ಯ ಎನ್ನುವುದಾದರೆ 'ಸ್ಟಾಂಡಿಂಗ್ ಟ್ರೀಸ್' ಏನಿವೆ ಅವನ್ನು ಯಾರೂ ಮುಚ್ಚಿಟ್ಟಿಲ್ಲ. ಕೆಟ್ಟಿರುವ ಮರಗಳನ್ನು ಹೊತ್ತು ಕೊಂಡು ಹೋಗಿ ಪೆಟ್ಟಿಗೆಯಲ್ಲಿ ಹಾಕಿಡಲು ಸಾಧ್ಯವಿಲ್ಲ. ಯಾವ ಕಮಿಟಿ ಬೇಕಾದರೂ ಬರಲಿ, ಯಾರು ಬೇಕಾದರೂ ಬರಲಿ, ಅವರು ಇನ್‌ಸ್ಪೆಕ್ಷನ್ ಮಾಡಿಕೊಂಡು ಬರಬಹುದು. 10–20 ತಾಲ್ಲೂಕುಗಳಲ್ಲಿ ನಮ್ಮ ಸರ್ಕಾರದ ಕಾನೂನು ಪಾಲನೆ ಎಷ್ಟರಮಟ್ಟಿಗೆ ಆಗುತ್ತಿದೆ ಎನ್ನುವುದು ವೇದ್ಯವಾಗುತ್ತದೆ. ಒಬ್ಬೊಬ್ಬರು ಒಂದೊಂದು ಅಭಿಪ್ರಾಯವನ್ನು ಕೊಡುವುದರ ಬದಲು ಆಂಧ್ರ ಮತ್ತು ಮದ್ರಾಸ್ ಕಡೆ ಇರುವಂತೆ ಇತರ ವಿಚಾರಗಳಲ್ಲಿ ಹೇಗೆ ಅನುಕರಣೆ ಮಾಡುತ್ತಿದ್ದೀರೋ ಈ ವಿಚಾರದಲ್ಲಿ ಅದೇ ತರಹ ಮಾಡಿ. ಒಳ್ಳೆಯದನ್ನು ಬಿಟ್ಟು ಕೆಟ್ಟದ್ದನ್ನು ಮಾತ್ರ ಮಾಡುವುದಕ್ಕೆ ಹೋಗಿತ್ತೀರಿ. ನಾನ್ ಗೆಜೆಟೆಡ್ ನೌಕರರಿಗೆಲ್ಲ ಮದ್ರಾಸ್ ರಾಜ್ಯದಲ್ಲಿರುವಂತೆ ಅಲೋಯನ್ಸ್ ಮುಂತಾದುವನ್ನು ಕೊಡುತ್ತೇವೆಂದು ಹೇಳಿದಿರಿ. ಮದ್ರಾಸಿನಲ್ಲಿ ಸಾವಿರ ರೂಪಾಯಿ ಸಂಬಳ ಬರುವವರಿಗೂ ನೂರು ರೂಪಾಯಿ ಸಿಕ್ಕುತ್ತದೆ. ಅದೇ ಒಬ್ಬ ಜವಾನನಿಗೆ ಮೂರು ರೂಪಾಯಿ ಮಾತ್ರ ಬರುತ್ತದೆ. ಕಡಮೆ ಸಂಬಳ ಬರುವ ನೌಕರರಿಗೆ ಹೆಚ್ಚು ಅಲೋಯನ್ಸ್ ಕೊಡಬೇಕು. 400-500 ರೂಪಾಯಿಗಳಿಗಿಂತ ಕಡಮೆ ಸಂಬಳ ಬರುವ ನೌಕರರಿಗೆಲ್ಲ ಕಡಮೆ ಸಂಬಳ ಬರುವವರಿಗೆ ಜಾಸ್ತಿ ಬರಬೇಕು ಮತ್ತು ಸಂಬಳ ಜಾಸ್ತಿ ಬರುವವರಿಗೆ ಕಡಮೆ ಬರಬೇಕು. ಈ ರೀತಿ ಮಾಡಬೇಕು ಎಂದು ಹೇಳುತ್ತೇನೆ.

ಪಾನನಿರೋಧದ ವಿಷಯದಲ್ಲಿ ತೀವ್ರವಾಗಿ ಆಲೋಚನೆ ಮಾಡಬೇಕು. ಇಲ್ಲದೆ ಇದ್ದರೆ ಬೊಕ್ಕಸಕ್ಕೆ ಬರತಕ್ಕ ಹಣ ಪೋಲಾಗುತ್ತದೆ. ಜನರು ಫ್ರೆಂಚ್ ಪಾಲಿಷ್, ಬೂಟ್ ಪಾಲಿಷ್ ಎಂದು ಏನೇನೋ ಹಾಕಿ ಮಾದಕ ಪಾನೀಯಗಳನ್ನು ತಯಾರು ಮಾಡುತ್ತಾರೆ. ಅದನ್ನು ಜನ ಕುಡಿಯುತ್ತಿದ್ದಾರೆ. ಒಂದು ಗಂಟೆಗೆ 15-20 ಗ್ಯಾಲನ್ ಮಾದಕ ಪಾನೀಯವನ್ನು ತಯಾರು ಮಾಡಬೇಕಾದರೆ ಹೇಗೆ ಸಾಧ್ಯ ಎನ್ನುವುದನ್ನು ನೋಡಿ.

ಚಿಕ್ಕಮಗಳೂರು ಕಾಫಿ ಪ್ಲಾಂಟೇಷನ್‌ಗಳಲ್ಲಿ ಕೆಲಸ ಮಾಡುವ ಜನರ ಎಕ್ಸ-ರೇ ತೆಗೆದರೆ ಅವರ ಶರೀರ ಪ್ರಕೃತಿ ಯಾವ ರೀತಿ ಇದೆ ಎಂದು ಗೊತ್ತಾಗುತ್ತದೆ. ಇದಕ್ಕೆ ಕಾರಣವೇನು ಎನ್ನುವುದನ್ನು ನೋಡಿದರೆ ಕಳ್ಳಭಟ್ಟಿ ಸಾರಾಯಿ ಸೇವನೆ ಮಾಡುವುದು ಮುಖ್ಯ ಕಾರಣ ಎಂದು ಹೇಳಬಹುದು.

ಎಕ್ಸೈಸ್ ರಿಸರ್ವ್‌ಲ್ಯಾಂಡ್ ಎನಿದೆ ಅದರಲ್ಲಿರುವ ಜಮೀನು ಸಾಮಾನ್ಯ ಮನುಷ್ಯನಿಗೆ, ಯಾರು ದರಖಾಸ್ತು ಹಾಕುತ್ತಾರೆಯೋ ಅವರಿಗೆ ಸಿಕ್ಕುವುದಿಲ್ಲ. ಆದರೆ ಯಾರೋ ಕೆಲವರಿಗೆ ಹತ್ತಿಪ್ಪತ್ತು ಎಕರೆ ಭೂಮಿ ಅನಾಯಾಸವಾಗಿ ಸಿಕ್ಕುತ್ತದೆ. ಈ ತಿಂಗಳು ಅರ್ಜಿ ಹಾಕಿ ಜಮೀನನ್ನು ಪಡೆದು ಬರುವ ತಿಂಗಳು ತೆಂಗಿನಗಿಡ ಹಾಕಿ ಬೇರೆ ಯಾರಿಗಾದರೂ ಮಾರಾಟ ಮಾಡಿಬಿಡುತ್ತಾರೆ. ಇದು ಮಾನ್ಯ ಮಂತ್ರಿಯವರ ಗಮನಕ್ಕೂ ಬಂದಿದೆ.

ಶ್ರೀ ಎಂ. ವಿ. ರಾಮ ರಾವ್.--ಎಕ್ಸೈಸ್ ಇಲಾಖೆ ಜಮೀನು ವಿಲೇವಾರಿ ಮಾಡುವುದಿಲ್ಲ.

ಶ್ರೀ ಕೆ. ಪಿ. ರೇವಣ್ಣಸಿದ್ಧಪ್ಪ.—ಅದನ್ನು ಪರಿಶೀಲನೆ ಮಾಡಿ ವಜಾ ಮಾಡಿ, ಇಲ್ಲದಿದ್ದರೆ ತಾಲ್ಲೂಕು ಆಫೀಸಿಗೆ ಕಳುಹಿಸಿಕೊಡಿ. ಲ್ಯಾಂಡ್ ರೂಲ್ಸ್ ಪ್ರಕಾರ ಇದ್ದರೆ ಕೊಡಿ. 8-10 ವರ್ಷಗಳ ಹಿಂದೆ ಬಂದಂಥವುಗಳು ಇನ್ನೂ ರಿಲೀಜ್ ಆಗಿಲ್ಲ. ಅಂದ ಮೇಲೆ ಈಗ ಬಂದದ್ದು ಹೇಗೆ ರಿಲೀಜ್ ಆಯಿತು?

ಇನ್ನು ಎಕ್ಸೈಜು ಹರಾಜು ವಿಷಯ. ಈ ವಿಚಾರವಾಗಿ ಇವರ ಉದ್ದೇಶ ಸಾಧುವೋ ಅಸಾಧುವೋ ಗೊತ್ತಿಲ್ಲ. ದೊಡ್ಡದೊಡ್ಡ ಕಂಟ್ರಾಕ್ಟರುಗಳಿಗೆ ಅನುಕೂಲವಾಗುವ ರೀತಿಯಲ್ಲಿ ಸಿಟಿ ಮತ್ತು ಅರ್ಬನ್ ಏರಿಯಾದಲ್ಲಿ ಪೂರ್ವಕಾಲದಲ್ಲಿ ಇದನ್ನು ಫಿರ್ಕಾ ಅವರು ಮಾಡುತ್ತಿದ್ದರು. ಆ ರೀತಿ ಪೋಟಾಪೋಟಿಯಿಂದ ಸರ್ಕಾರಕ್ಕೆ ಹೆಚ್ಚು ಹಣ ಬರುತ್ತಿತ್ತು. ತಮಗೆ ಗೊತ್ತಿರುವ ಹಾಗೆ ಇದು ಕಾಂಪಿಟಿಷನ್ನಿನಲ್ಲಿಯೇ ಬರಬೇಕೆಂದು ಹೇಳುತ್ತೇನೆ. ಇನ್ನು ಟೆಂಡರುಗಳಲ್ಲಿ ಸ್ವಲ್ಪ ತೊಂದರೆ ಇದೆ. ಇದನ್ನು ಕೊಡುವಾಗ ಅಧಿಕಾರಿಗಳನ್ನು ವಶಮಾಡಿಕೊಂಡು ಹೋಗುವ ಪದ್ಧತಿ ಇದೆ. ಎರಡು ಟೆಂಡರುಗಳನ್ನು ಹೊಡೆದಾಗ ಒಂದು ರೂಪಾಯಿ ಹೆಚ್ಚು ಕಡಿಮೆ ಮಾಡಿಕೊಳ್ಳುವುದಕ್ಕೆ ಅವಕಾಶವಿದೆಯೆಂದು ಕೆಲವರಿಗೆ ಸಂಶಯ ಮೂಡಿದೆ. ಒಟ್ಟಿನಲ್ಲಿ ಫಿರ್ಕಾ ಅವರೇ ಎಕ್ಸೈಜು ಹರಾಜನ್ನು ಮಾಡಬೇಕು. ಕೋರ್ಟಿನ ವಿಷಯವಾಗಿ ಹೇಳೋಣವೆಂದರೆ ಸಮಯವಿಲ್ಲ. ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

**Sri M. V. RAMA RAO** (Minister for Law and Excise).—Mr. Speaker, Sir, the debate on the Demands that I have moved before this House has confined itself mainly to an adverse criticism of the policy of prohibition in respect of the Excise Demand. It has been sought to be made out that prohibition is a total failure and that Government would be well advised to scrap this policy as they call it. Facts and figures were furnished by one Hon'ble Member who spoke recently which indicated that the incidence of illicit distillation is not confined to the dry are as of the State As a matter of fact, prosecutions for illicit distillation or for unlawful possession of liquor are launched not only in the dry areas of the State but also in respect of the wet areas. Unlicensed liquor is manufactured not merely with a view to violate the prohibition policy or the licensing law under the Excise Act. Addicts are inclined to favour a particular brand of drink. Some people prefer toddy. Other people prefer arrack. If we enquire into the reason for this particular preference, it may probably turn out to be that arrack addicts prefer arrack because of the kick that they get by consuming a small quantity of arrack while toddy addicts may not be able to explain why they prefer toddy from the point of view of getting this kick as it is called. Whatever may be the reason for the particular preference, I think it will be generally agreed that the habit of drinking is not a desirable habit and it must be the endeavour of every enlightened person irrespective of political or party affiliations to see that ignorant, poor and helpless people do not deprive themselves of the wages of their labour by spending on drink and going home to beat their wives and starve their children. On this matter I find that there has been no controversy in this House during this debate. It is generally

(SRI M. V. RAMA RAO)

agreed that when people criticise the policy of prohibition or its alleged failure, they are not advocating drink or the habit of drink but they are highlighting what they conceive to be the lapses in the administration in regard to the enforcement of this policy of prohibition.

Sri K. LAKKAPPA.—What about foreign countries?

Sri M. V. RAMA RAO.—I have not had the advantage of going to any foreign country and I am sure Mr. Lakkappa when he does have, the opportunity will enlighten me as to what he sees there and I am not young enough to look forward to going to foreign countries.

Then, Sir, when we examine this Demand for the scrapping of the policy of prohibition because of its so called failure, we have to look into the reasonableness of this demand and for that purpese I would like to furnish to the House certain facts and figures pertaining to the violation of the law in respect of particular statutes. For the year 1954, the number of prosecutions for offences committed under the Indian Penal Code were of the order of 27,000. The total number of offences committed which may include offences not investigated or offence not reported to the police in respect of the Prohibition Act in the year 1964 was 67,000 or 68,000. The number of prosecutions for offences for violation of the Police Act are over 81,000 and prosecutions for violations of the Motor Vehicles Act number 120,000. If the logic, namely, because there is widespread violation of this law and a very large number of foffencess against this Act are committeed, is to be carried to its logical conclusion there should be a demand not merely for scrapping the Prohibition Act but for scrapping, whatever that may mean, the Police Act, the Motor Vehicles Act and next perhaps the Indian Penal Code. If we argue that because theft is committed or robbery is committed or murders are committed, we do not say that the Indian Penal Code has been a failure and that it should be repealed.

Sri K. LAKKAPPA.—That is due to defective law.

